# 24

# ಮಾದರಿಯ ಒಂದು ಪರಿವರ್ತನೆ

## (8:26-40)

ನನ್ನ ಬೋಧನೆಯ ಮೊದಲಿನ ದಿನಗಳಿಂದಲೂ, ಪರಿವರ್ತನೆಯ ನನ್ನ ಉತ್ತಮ ಉದಾಹರಣೆಯು ಐಥಿಯೋಪ್ಯದ ಕಂಚುಕಿಯಾಗಿದ್ದಾನೆ. ಇನ್ನಿತರ ಉದಾಹರಣೆಗಳು ಕೆಲ ವಿವರಣೆಗಳಲ್ಲಿ ಸ್ಪಷ್ಟವಾಗಬಹುದು (ಅಪೊಸ್ತಲರಕೃತ್ಯಗಳು 2ರಲ್ಲಿನ ದೀಕ್ಷಾಸ್ನಾನದ ಉದ್ದೇಶ ದಂತಹವುಗಳು); ಆದರೆ ಪರಿವರ್ತನೆಯನ್ನು ಸುಂದರವಾದ ಸರಳವಾದ ಮಾರ್ಗದಲ್ಲಿ ಸಮಗ್ರವಾದ ಚಿತ್ರಣವನ್ನು ಕೊಡುವಾಗ, ಅಪೊಸ್ತಲರಕೃತ್ಯಗಳು 8:26-40ರ ಭಾಗದ ಕುರಿತು ಇನ್ನೂ ಉನ್ನತೀಕರಿಸುವದು ಕಷ್ಟದಾಯಕವಾಗಿದೆ. ಶ್ರೇಷ್ಟ ಬೋಧಕರಾದ ಮಾರ್ಷಲ್ ಕೀಬಲ್ (Marshall Keeble) ಅವರು ಇದನ್ನು "ಮಾದರಿಯ ಒಂದು ಪರಿವರ್ತನೆ" ಎಂದು ಕರೆದಿದ್ದಾರೆ. J. W. ರಾಬರ್ಟ್ಸ್ ಇದನ್ನು "ಇದು ಸರ್ವಕಾಲೀನ ಅವಶ್ಯಕ ವಿಶೇಷಕ ಸಂಗತಿಗಳನ್ನು[1] ಹೊಂದಿದ ಮಾದರಿ" ಎಂದು ಕರೆದಿದ್ದಾರೆ. ನಾವು ಈ "ಮಾದರಿಯ ಒಂದು ಪರಿವರ್ತನೆ" ಅಧ್ಯಯನವನ್ನು ಮಾಡುತ್ತಿರುವಂತೆ ನಾವೂ ಕೂಡಾ ಈ ಪರಿವರ್ತನೆಯೊಂದಿಗೆ ಹೋಲಿಕೆ ಮಾಡಿಕೊಳ್ಳುವದು ಅವಶ್ಯವಾಗಿದೆ.

### ಮಾದರಿ ಬೋಧಕ: ಫಿಲಿಪ್ಪಿ (8:26, 27)

ನಮ್ಮ ವೇದ ಭಾಗವು ಈ ರೀತಿ ಪ್ರಾರಂಭವಾಗುತ್ತದೆ, "ಅಷ್ಟರಲ್ಲಿ ಕರ್ತನ ದೂತನು[2] ಫಿಲಿಪ್ಪನಿಗೆ ನೀನು ಎದ್ದು ದಕ್ಷಿಣದ ಕಡೆಗೆ ಯೆರೂಸಲೇಮಿನಿಂದ ಗಾಜಾಕ್ಕೆ[3] ಹೋಗುವ ದಾರಿಯಲ್ಲಿ ಹೋಗು, ಅದು ಅಡವಿ[4] (ಇದೊಂದು ಮರುಭೂಮಿಯಾಗಿತು) ಎಂದು ಹೇಳಿ ದನು. ಅವನು ಎದ್ದು ಹೊರಟು ಹೋದನು" (ವಚನ 26, 27ಎ) ಎಂಬುದಾಗಿ. ನಾವು ಗಮನಿಸಿದಂತೆ, ಅಧ್ಯಾಯ 6ರಲ್ಲಿರುವಂತೆ ಉಟೋಪಚಾರದ ಸೇವೆಗೆ ನೇಮಕಗೊಂಡ ಏಳು ಜನರಲ್ಲಿ ಫಿಲಿಪ್ಪನೂ ಕೂಡಾ ಒಬ್ಬನಾಗಿದ್ದನು. ನಂತರದಲ್ಲಿ ಆತನು "ಸೌವಾರ್ತಿಕನಾದ ಫಿಲಿಪ್ಪಿ" ಎಂದು ಗುರುತಿಸಲ್ಪಟ್ಟನು (21:8).

ಫಿಲಿಪ್ಪನು ಆತ್ಮಗಳ ಬಗೆಗೆ ಬಲು ಕಾಳಜಿಯುಳ್ಳವನಾಗಿದ್ದ ಕಾರಣ ಆತನು ನಮಗೆ ಮಾದರಿಯಾಗಿದ್ದಾನೆ. ಆತನು ಸಮಾರ್ಯದ ಭಕ್ತಿ ಸಂಜೀವನದಲ್ಲಿ ತೊಡಗಿಕೊಂಡಿದ್ದನು. ನೂರಾರು ಜನರು ಸುವಾರ್ತೆಗೆ ಸ್ಪಂದಿಸುವವರಾಗಿದ್ದರು. ದೇವರು ಆತನಿಗೆ ಒಬ್ಬ ಮನುಷ್ಯನಿಗೆ ಬೋಧಿಸಲು ಹೇಳಿದಾಗ, ಆತನು ಹಿಂದೆಮುಂದೆನೋಡಲಿಲ್ಲ! "ಅವನು (ತಕ್ಷಣವೇ) ಎದ್ದು ಹೊರಟು ಹೋದನು." ಯಾವ ಗುಂಪು ಫಿಲಿಪ್ಪಿಯರಿಗೆ ಬಹುಸಣ್ಣದಾದ ಗುಂಪಾಗಿರಲಿಲ್ಲ!

### ಮಾದರಿ ಪ್ರೇಕ್ಷಕ ಕಂಚುಕಿ (8:27-31)

ಫಿಲಿಪ್ಪನು ತನಗೆ ನಿರ್ದೇಶಿಸಲ್ಪಟ್ಟ ಪ್ರದೇಶಕ್ಕೆ ತಲುಪಿದಾಗ, ಆತನಿಗೆ ಮುಂದೆ ಏನುಮಾಡಬೇಕೆಂದು ಬಹುಶಃ ಆಶ್ಚರ್ಯವಾಗಿರಬೇಕು. ಆತನು ಬಹುಕಾಲದವರೆಗೆ ಅಲ್ಲಿ ಆಶ್ಚರ್ಯಪಡಬೇಕಾಗಿರಲಿಲ್ಲ. ಕೂಡಲೇ ಒಂದು ರಥವು ಅಲ್ಲಿ ಕಾಣಿಸಿತು.[5] "ಫಿಲಿಪ್ಪನು ಹೋಗುತ್ತಿರುವಾಗ ಐಥಿಯೋಪ್ಯ[6] ದೇಶದ ಒಬ್ಬ ಮನುಷ್ಯನನ್ನು ಕಂಡನು. ಅವನು ಕಂಚುಕಿಯೂ ಐಥಿಯೋಪ್ಯದ ರಾಣಿಯಾಗಿದ್ದ[7] ಕಂದಾಕೆಯ ಕೈ ಕೆಳಗೆ ದೊಡ್ಡ ಅಧಿಕಾರಿಯೂ ಆಕೆಯ ಎಲ್ಲಾ ಖಜಾನೆಯ ಮೇಲ್ವಿಚಾರಕನೂ ಆಗಿದ್ದನು. ಆತನು ದೇವಾರಾಧನೆಗೆಂದು

ಯೆರೂಸಲೇಮಿಗೆ ಬಂದು ಹಿಂತಿರುಗಿ ಹೋಗುವಾಗ ..." (ವಚನಗಳು 27ಬಿ, 28). ಈತನು ರಾಜಕೀಯವಾಗಿ ದೊಡ್ಡ ವ್ಯಕ್ತಿ, ಐಥಿಯೋಪ್ಯದ ಖಜಾನೆಯ ಮೇಲ್ವಿಚಾರಕನಾದ ಈತನು ಧಾರ್ಮಿಕ ವ್ಯಕ್ತಿಯಾಗಿದ್ದನು. ನಾನು ಇದನ್ನು ನೋಡಲು ಬಯಸುತ್ತೇನೆ! (ಧಾರ್ಮಿಕತ್ವವು ಸ್ವಲ್ಪಮಟ್ಟಿಗೆ ರಾಜಕೀಯ ಬಲವನ್ನು ಹೊತ್ತಿರುವಂತಹ ಅಮೇರಿಕಾದಲ್ಲಿನ ಒಂದು ಭಾಗದಲ್ಲಿ ನಾನು ವಾಸಿಸುತ್ತಿರುವುದು ನನಗೆ ಹೆಮ್ಮೆಯ ಸಂಗತಿಯಾಗಿದೆ).

ಈ ಅಧಿಕಾರಿಯ ಬಗೆಗೆ ನಾವು ಹೆಚ್ಚೇನೂ ಅರಿಯೆವು. ಆತನೊಬ್ಬ ಐಥಿಯೋಪ್ಯರಿಂದ ಅವರಿಗಾಗಿ ಸೇವೆಮಾಡಲು ಒತ್ತಾಯಿಸಲ್ಪಟ್ಟ ಯೆಹೂದ್ಯನಾಗಿರಬೇಕು. ಅಥವಾ ನೆರೆಯ ಐಥಿಯೋಪ್ಯರು ಯೆಹೂದಿ ಮತಾವಲಂಬಿಯಾಗಿರಬೇಕು[8] ಇದಾವುದನ್ನೂ, ನಾವರಿಯೆವು. ನಾವು ಇದನ್ನು ತಿಳಿಯೆವು: ಆತನು ತನ್ನ ಧರ್ಮದ ಬಗೆಗೆ ಬಲು ಗಂಭೀರವುಳ್ಳವನಾಗಿದ್ದನು ಮತ್ತು ತನ್ನ ನಂಬಿಕೆಯಲ್ಲಿ ಪ್ರಾಮಾಣಿಕನಾಗಿದ್ದನು! ಆತನು ದೇವರನ್ನು ಆರಾಧಿಸಲೆಂದು ಮನೆಯಿಂದ ಯೆರೂಸಲೇಮಿಗೆ ಪ್ರಯಾಣಿಸಲು ಅನೇಕ ನೂರು ಮೈಲಿಗಳ ಪ್ರಯಾಣವನ್ನು ಆತನು ಮಾಡಿರಬಹುದು. ಮುಂದೆ, ಆತನು ಯೆರೂಸಲೇಮನ್ನು ಪ್ರವೇಶಿಸಿದಾಗ ತನಗೆ ದೇವಾಲಯದ ಪರಿಶುದ್ಧ ಸ್ಥಳಕ್ಕೆ ಪ್ರವೇಶಿಸುವ ಪರವಾನಿಗೆ ಸಿಕ್ಕುವುದು ದುಸ್ತರವಾಗಿದ್ದಾಗ್ಯೂ ಆತನು ದೀರ್ಘವಾದ ಪ್ರಯಾಣವನ್ನು ಮಾಡಿದನು!

ಈ ಐತಿಯೋಪ್ಯದ ಅಧಿಕಾರಿಯನ್ನು ಲೂಕನು ಯಾಕೆ ಕಂಚುಕಿ ಎಂದು ಸೂಚಿಸಿದನೋ ಎಂದು ನನಗೆ ಆಶ್ಚರ್ಯವಾಗುತ್ತದೆ. ಕಂಚಿಯಾಗಿದ್ದುಕೊಂಡು ಒಬ್ಬ ಮನುಷ್ಯನು ಅನೇಕ ಸಂಗತಿಗಳಲ್ಲಿ ಪ್ರಸಿದ್ಧನಾಗಲು ಆಗುತ್ತಿರಲಿಲ್ಲ![9] ಇದೆಲ್ಲಕ್ಕೂ ನಾನು ಒಂದು ಸಮಾರೋಪಕ್ಕೆ ಬಂದಿದ್ದೇನೆ ಆದೆಂದರೆ ಲೂಕನು ಆ ಮನುಷ್ಯನ ದೇವರಿಗೆ ಒಪ್ಪಿಸಿಕೊಳ್ಳುವಿಕೆಯ ವಿವರಗಳ ಮಾಹಿತಿಯನ್ನು ನಮಗೆ ಕೊಡಲು ಸೂಚಿಸುವದಕ್ಕಾಗಿ ಲೂಕನು ಇದನ್ನು ಹಂಚಿಕೊಳ್ಳುತ್ತಿದ್ದಾನೆ ಎಂದು ಹಳೆಯ ಒಡಂಬಡಿಕೆಯ ಪ್ರಕಾರ, ಕಂಚುಕಿಯೊಬ್ಬನು ಪರಿಶುದ್ಧ ಸ್ಥಳವನ್ನು ಪ್ರವೇಶಿಸುವಂತಿರಲಿಲ್ಲ (ಧರ್ಮೋಪದೇಶಕಾಂಡ 23:1).[10] ಅತೀ ಹೆಚ್ಚೆಂದರೆ ಐಥಿಯೋಪ್ಯದ ಈ ಒಳ್ಳೆಯ ಮನುಷ್ಯನು ಅನ್ಯರ ಅಂಗಳದಲ್ಲಿ ಸಾಮಾನ್ಯವಾದ ದೇವಾಲಯದ ಸಂಕೀರ್ಣದಲ್ಲಿ ಪರಿಶುದ್ಧ ಸೇವೆಯನ್ನು ಮಾಡಿರಬಹುದು.[11] ಇದು ಹೆಚ್ಚುಕಡಿಮೆ ನಮ್ಮ ವಿಶೇಷವಾದ ಧಾರ್ಮಿಕ ಕಾರ್ಯಗಳಿಗಾಗಿ ಸಾವಿರಾರು ಮೈಲಿ ಪ್ರಯಾಣಿಸುವಾಗ ಹೆಚ್ಚೆಂದರೆ ಚರ್ಚಿನ ಮುಂದಿನ ಅಂಗಳದಲ್ಲಿನ ನಮ್ಮ ಸೇವೆಗೆ ಇದು ಸಮವಾಗಿದೆ. ಆದಾಗ್ಯೂ ಕಂಚುಕಿಯು, ಇನ್ನೂ ಪ್ರಯಾಣವನ್ನು ಮಾಡುತ್ತಿದ್ದಾನೆ. ಆತನು ಆರಾಧನೆಯನ್ನು ಮಾಡದೇ ಇರುವ ಬದಲಾಗಿ, ಆರಾಧನೆಯ ಒಂದು ತುಣುಕನ್ನಾದರು ಮಾಡುವುರಲ್ಲಿ ಆತನು ಸಂತೃಪ್ತಿಗೊಂಡನು. (ಕೆಲ ವ್ಯಕ್ತಿಗಳು ಇಂದು "ನಾನು ಆರಾಧನೆಗೆ ಹೋಗುತ್ತಿಲ್ಲ ಯಾಕೆಂದರೆ ನನಗೆ ಆದರಿಂದ ಏನೂ ಸಿಕ್ಕದು" ಎಂದು ಹೇಳುವ ಆರೋಪಿಸುವ ವ್ಯಕ್ತಿಗಳೊಂದಿಗೆ ಕಂಚುಕಿಯನ್ನು ಎಷ್ಟೊಂದು ವ್ಯತ್ಯಾಸವನ್ನು ಮಾಡಬಹುದಲ್ಲವೇ.)

ಬಹುಶಃ ಕಂಚುಕಿಯ (ನಪುಂಸಕನು) ವಿಶೇಷ ಹಬ್ಬದ ದಿನಕ್ಕಾಗಿ ಯೆರುಸಲೇಮಿಗೆ ಬಂದಿರಬಹುದು. ಯಾವುದೇ ಸಂದರ್ಭದಲ್ಲಿ ಆತನು ತನ್ನ ರಥದ ಹಿಂಬಾಗದಲ್ಲಿ ಆತನು: ತನ್ನ ರಥದಲ್ಲಿ ಕುಳಿತಿರುತ್ತಿದ್ದನು.[12] ಮತ್ತು "ಯೆಶಾಯನ ಪ್ರವಾದನೆಯ ಗ್ರಂಥವನ್ನು ಓದುತ್ತಿದ್ದನು"[13] (ವಚನ 28). ಇಲ್ಲಿ ಇನ್ನೊಂದು ಕದಲಿಸುವಂತಹ ಚಿತ್ರಣವು ಇಲ್ಲಿದೆ: ಒಬ್ಬ ಸರಕಾರಿ ಅಧಿಕಾರಿಯು ಪ್ರಯಾಣಿಸುತ್ತಿರುವಂತೆ ಬೈಬಲ್‌ನ್ನು ಓದುತ್ತಿದ್ದನು! ಒಂದು ವೇಳೆ ಅನೇಕ ಸಾರ್ವಜನಿಕ ಸೇವಕರು ಈ ಉದಾಹರಣೆಯನ್ನು ಅನುಸರಿಸಿದ್ದೇ ಆದರೆ, ಈ ಜಗತ್ತು ವಾಸಿಸಲು ಒಳ್ಳೆಯ ಸ್ಥಳವಾಗಿ ಪರಿಣಮಿಸಬಹುದು!

ಈ ಸಮಯವು ಆತನ ವೀಕ್ಷಕರಿಗೆ ಬೋಧಕನನ್ನು ಪರಿಚಯಿಸುವ ಸಮಯವಾಗಿದೆ. "ದೇವರಾತ್ಮನು ಫಿಲಿಪ್ಪನಿಗೆ ನೀನು ರಥದ ಆ ಹತ್ತಿರ ಹೋಗಿ ಅದರ ಸಂಗಡಲೇ ನಡೆ ಎಂದು ಹೇಳಿದನು" (ವಚನ 29). ತಿರುಗಿ ಯಾವುದೇ ಹಿಂದುಮುಂದಿಲ್ಲದೇ ವಿಧೇಯನಾದನು.

ಆತನು ಆ ರಥದ ಜೊತೆಯಲ್ಲಿಯೇ ಓಡಲು ಆರಂಭಿಸಿದನು. "ಫಿಲಿಪ್ಪನು ಓಡಿ ಹೋಗಿ ಆ ಮನುಷ್ಯನು ಯೆಶಾಯ ಪ್ರವಾದಿಯ ಗ್ರಂಥವನ್ನು ಓದುತ್ತಿರುವುದನ್ನು ಕೇಳಿದನು" (ವಚನ 30ಎ).[14] ಓದಲ್ಪಡುತ್ತಿದ್ದ ಈ ಪರಿಚ್ಛೇದವು ಯೆಶಾಯ 53 ಆಗಿತ್ತು. ಫಿಲಿಪ್ಪನು ಆ ಅಧಿಕಾರಿಯನ್ನು ಕೂಗಿ ಕರೆದು "ನೀನು ಓದುವದು ನಿನಗೆ ತಿಳಿಯುತ್ತದೋ?" (ವಚನ 30ಬಿ) ಎಂದು ಕೇಳಿದನು. ಫಿಲಿಪ್ಪನ ವಿಚಾರವು ಒಳ್ಳೆಯದಾಗಿತ್ತು; ಆತನು ಬಹುಶಃ ಆ ಮನುಷ್ಯನಿಗೆ ಬೋಧಿಸಲು ಎಲ್ಲಿಂದ ಆರಂಭಿಸಬೇಕು ಎಂದು ಆತನು ತಿಳಿಯಬಯಸಿದ್ದನು. ಇದಲ್ಲದೇ, ಆ ಪದಗಳು ಇತರರ ದೃಷ್ಟಿಯಲ್ಲಿ ಅವಮಾನ ಮಾಡುವಂತವುಗಳಾಗಿದ್ದವು. ಆದರೆ ಕಂಚುಕಿಯು (ನಪುಂಸಕನು) ದೇವರು ಯಾಕೆ ವಿಶೇಷವಾಗಿ ಆತನನ್ನು ಆಯ್ದುಕೊಂಡನು ಎಂಬುದನ್ನು ಫಿಲಿಪ್ಪನಿಗೆ ಉತ್ತರಿಸುವದರ ಮೂಲಕ ತೋರಿಸಿದನು "ಯಾರಾದರೂ ನನಗೆ ಅರ್ಥ ತಿಳಿಸಿಕೊಟ್ಟ ಹೊರತು ಅದು ನನಗೆ ಹೇಗೆ ತಿಳಿದೀತು" (ವಚನ 31ಬಿ). ಖಜಾನೆಯ ಅಧಿಕಾರಿಯು "ಒಬ್ಬ ಮಾದರಿ ವೀಕ್ಷಕನಾಗಿದ್ದನು" ಯಾಕೆಂದರೆ ಆತನು ತೆರೆದ ಮನದವನಾಗಿದ್ದನು ಮತ್ತು ಕಲಿಯುವ ಮನಸ್ಸನ್ನು ಹೊಂದಿದವನಾಗಿದ್ದನು. ಇಂಥ ಜನರನ್ನು ಕಂಡುಕೊಳ್ಳುವದು ಎಂಥ ಮೈನವಿರೇಳಿಸುವ ಸಂಗತಿಯಾಗಿದೆ!

ಕಂಚುಕಿಯ ಮಾತುಗಳು ದೇವರ ಚಿತ್ತವನ್ನು ಅರಿಯುವದು ಸಾಮಾನ್ಯ ಜನರಿಗೆ ಅಸಾಧ್ಯವಾದದ್ದು ಎಂಬುದನ್ನು ತಿಳಿಸುತ್ತಿಲ್ಲ. ನನ್ನ ಜೀವಿತದುದ್ದಕ್ಕೂ, ಬೈಬಲ್ ಕಲಿಸುವಂತಹ ರಕ್ಷಣೆ, ಸಭೆ ಮತ್ತು ಕ್ರೈಸ್ತೀಯ ಜೀವಿತದ ಬಗೆಗೆ ತಮ್ಮಷ್ಟಕ್ಕೆ ತಾವೇ ಕಲಿತುಕೊಂಡಂತಹ ಅನೇಕ ಜನರನ್ನು ನಾನು ತಿಳಿದಿದ್ದೇನೆ. ವಾಸ್ತವವೆಂದರೆ ನಮ್ಮಲ್ಲಿ ಅನೇಕರು, ಕಂಚುಕಿಯಂತೆ, ಸಹಾಯದ ಅವಶ್ಯಕತೆಯನ್ನು ಹೊಂದಿರುತ್ತಾರೆ. ರೋಮಾಪುರ 10ರಲ್ಲಿ ಪೌಲನ ಈ ಕೆಳಗಿನ ಪ್ರಶ್ನೆಯು ಆತನು ಅವರಿಗೆ ಮೊದಲು ಬರೆದ ಹಾಗೆ ಈ ದಿನವೂ ಸಮಂಜಸ ವಾಗಿದೆ: "ಆದರೆ ತಾವು ಯಾವನನ್ನು ನಂಬಲಿಲ್ಲವೋ ಆತನ ನಾಮವನ್ನು ಹೇಳಿಕೊಳ್ಳುವದು ಹೇಗೆ? ಸಾರುವವರು ಕಳಿಸಲ್ಪಡದೆ ಸಾರುವುದೆಲ್ಲಿ" (ರೋಮಾಪುರ 10:14) ದೇವವಾಕ್ಯದ ಬೋಧಕರು ಇನ್ನೂ ದೇವರ ಯೋಜನೆಯ ಭಾಗವಾಗಿದ್ದಾರೆ.

ಈ ತೆರದ ಮನಸ್ಸಿನ ಅಧಿಕಾರಿಯ ಜನರಿಗೆ ಪ್ರಾಮಾಣಿಕ ಹೃದಯದಿಂದ ಸಾರುವುದೇ ನೆಂದರೆ ತಮ್ಮ ದೇವರಿಗಾಗಿ ತಮ್ಮ ಅವಶ್ಯಕತೆಗಳನ್ನು ಗುರುತಿಸುವ ಜನರು ನಮಗೆ ಸಿಕ್ಕಿದ್ದಾದರೆ, ಒಂದು ವೇಳೆ ನಾವು ಅವರಿಗಾಗಿ ಕೇವಲ ನೋಡಬೇಕು. ಅಂಥ ಜನರನ್ನು ಕಾಣುವಲ್ಲಿ ನಾವು ವಿಫಲರಾಗಬಹುದು. ಕಾರಣ, ಕಂಚುಕಿಯಂತವರು, ಮಹತ್ವದ ಸ್ಥಾನವನ್ನು ಹೊಂದಿರುತ್ತಾರೆ ಮತ್ತು ಅವರು ಕ್ರಿಸ್ತನಿಗಾಗಿ ತಮ್ಮ ಅವಶ್ಯಕತೆಗಳನ್ನು ಹೊಂದಿಲ್ಲ ಎಂದು ನಾವು ತಿಳಿದುಕೊಳ್ಳುತ್ತೇವೆ. ನಾವು ಅವರನ್ನು ಕಾಣಲು ವಿಫಲರಾಗಬಹುದು ಕಾರಣ, ಕಂಚುಕಿಯಂತವರು, ತಮ್ಮ ಧಾರ್ಮಿಕ ನಂಬುಗೆಗಳಲ್ಲಿ ಬಲಯುತರಾಗಿರುತ್ತಾರೆ, ಮತ್ತು ಅವರು ನಮ್ಮನ್ನು ಕೇಳುತ್ತಿಲ್ಲ ಎಂದು ನಾವು ನೆನಸುವವರಾಗಿರುತ್ತೇವೆ. ಯಾವ ಮನುಷ್ಯನ ಬಗೆಗೂ ಪೂರ್ವಾಗ್ರಹಪೀಡಿತರಾಗಿರಬೇಡಿರಿ, ಆದರೆ ಒಳ್ಳೆಯದಕ್ಕಾಗಿ ಶ್ರದ್ಧೆಯುಳ್ಳ ಮತ್ತು ಪ್ರಾಮಾಣಿಕ ಹೃದಯಗಳನ್ನು ಹುಡುಕಿರಿ. ಅವುಗಳನ್ನು ನಾವು ಕಂಡುಕೊಂಡಾಗ, ಅವರನ್ನು ಕರ್ತನೆಡೆಗೆ ನಡೆಸೋಣ.

## ಪರಿವರ್ತನೆಯ ಮಾದರಿ ಸಾಧನ: ಸುವಾರ್ತೆ (8:30, 31, 35)

ಈ ಕಥೆಯನ್ನು ನಾವು ಮುಂದುವರೆಸುವದಕ್ಕಿಂತ ಮುಂಚೆ, ಒಳ್ಳೆಯ ಮನುಷ್ಯನ ಪರಿವರ್ತನೆ ಬಳಿಗೆ ತರುವ ದೇವರಿಂದ ಬಳಿಕೆಯಾದ ಸಾಧನದ ಬಗೆಗೆ ಗಮನಿಸಲು ಕ್ಷಣ ಹೊತ್ತು ನಿಲ್ಲೋಣ. ಇಂದು ಕೆಲವರು ನಂಬುವುದೇನೆಂದರೆ ದೂರವಾದ ಪಾಪಿಗಳು ಪರಿವರ್ತನೆಯನ್ನು ಹೊಂದುವುದಕ್ಕೆ ಅದ್ವಿತಿಯ "ಅನುಭವದ" ಅವಶ್ಯಕತೆಯಿದೆ ಎಂದು. ಇನ್ನೂ ಕೆಲವರು ಕಾಲ್ವಿನಿಸ್ಟ್ ಸಿದ್ಧಾಂತವಾದ ಅವಶ್ಯಕತೆಯಾದ ದೂರವಾದವರ ಹೃದಯದ

ಮೇಲೆ “ಪರಿಶುದ್ಧಾತ್ಮನ ನೇರವಾದ ಚಿಕಿತ್ಸೆ”ಯ (ಮಾನಸಾಂತರ ಹೊಂದಲು) ಅವಶ್ಯ ಇದೆ ಎಂದು ಇನ್ನೂ ಘೋಷಿಸುತ್ತಾರೆ. ಆದರೆ ಬೈಬಲು ನಮಗೆ ಬೋಧಿಸುವುದೇನೆಂದರೆ, ದೇವರ ಶಕ್ತಿಯು ದೂರವಾದ ಪಾಪಿಗಳನ್ನು ಕೆಲ ಅದ್ವಿತೀಯ “ನೇರ ಚಿಕಿತೆಯ” ಮಾರ್ಗವಾಗಿ ಮಾತ್ರ ರಕ್ಷಿಸಲು ಬಳಸುವಂತದ್ದಲ್ಲ, ಆದರ ಬದಲಾಗಿ ಆತನ ವಾಕ್ಯಗಳಿಂದಲೇ ಆಗಿದೆ. ಪೌಲನು ಹೇಳುವಂತೆ “ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ.” ಆ ಸುವಾರ್ತೆಯು ದೇವರ ಬಲಸ್ವರಾಪವಾಗಿದ್ದು ಮೊದಲು ಯೆಹೂದ್ಯರಿಗೆ ಆ ಮೇಲೆ ಗ್ರೀಕರಿಗೆ ಅಂತೂ ನಂಬುವವರೆಲ್ಲರಿಗೂ ಎಂದು (ರೋಮಾಪುರ 1:16 ಒತ್ತಿ ಹೇಳಿದ್ದು ನನ್ನದು) ಹೇಳಿದನು ಹಾಗೆಯೇ “ಸಾರಿದ ವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ *ಕ್ರಿಸ್ತನ* ವಾಕ್ಯವೇ ಆಧಾರ” (ರೋಮಾಪುರ 10:17; ಒತ್ತಿ ಹೇಳಿದ್ದು ನನ್ನದು).

ದೇವರ ವಾಕ್ಯವನ್ನು ಬಳಸಿಕೊಳ್ಳುವ ಸತ್ಯಾಂಶದ ರೂಪಾಂತರವು ಐಥಿಯೋಪ್ಯದ ಅಧಿಕಾರಿಯ ಪರಿವರ್ತನೆಯಲ್ಲಿ ಸುಂದರವಾಗಿ ಪ್ರಯೋಗಿಸಲ್ಪಟ್ಟಿತು. ಕಥೆಯು ಅದ್ವಿತಿಯ ಸಂಗತಿಗಳನ್ನು ಒಳಗೊಂಡಿದೆ ಎಂಬುದು ನಿಜ: ದೇವರು ಫಿಲಿಪ್ಪನ ಕೂಡ ಎರಡು ಸಾರಿ ಮಾತನಾಡಿದನು (ದೇವದೂತನ ಮೂಲಕ ಮತ್ತು ಆತ್ಮನ ಮೂಲಕ). ಇದು ಇನ್ನೂ “ಅದ್ಭುತಕಾರ್ಯಗಳ ಯುಗವಾಗಿದೆ” ಮತ್ತು ದೇವರು ನಿಯಂತ್ರಣದಲ್ಲಿದ್ದಾನೆ ಎಂಬುದನ್ನು ಖಚಿತಪಡಿಸಲು ಮತ್ತು ಕಂಚುಕಿಗೆ ಸತ್ಯ ಕೇಳಲು ಹಾಗೂ ಅದಕ್ಕೆ ವಿಧೇಯನಾಗಲು ಅವಕಾಶವು ಕೊಡಲ್ಪಟ್ಟಿತು ಎಂಬುದನ್ನು ಗಮನಿಸಿರಿ, ಹೇಗೂ, ದೇವರು ದೂರವಾದ ಪಾಪಿಯೊಡನೆ ಮಾತನಾಡಲಿಲ್ಲ, ಆದರೆ ಬೋಧಕರೊಡನೆ ಮಾತನಾಡಿದನು. ಒಂದು ವೇಳೆ ಇದು ರಹಸ್ಯಮಯವಾದ “ದಾರ್ಶನಿಕ ಅನುಭವವು” ಖಜಾನೆಯ ಅಧಿಕಾರಿಗೆ ಅವಶ್ಯವಿದೆ ಎಂದಿದ್ದರೆ ದೇವರು ಫಿಲಿಪ್ಪನ ಬದಲಾಗಿ ಆತನೊಡನೆಯೇ ಮಾತನಾಡಬಹುದಿತ್ತು - ಮತ್ತು ಸೌವಾರ್ತಿಕನ ಸುದೀರ್ಘವಾದ, ಶ್ರಮದ ಪ್ರಯಾಣವನ್ನು ಉಳಿಸಬಹುದಿತ್ತು.

ಕಂಚುಕಿಯ ದೃಷ್ಟಿಯಿಂದ ಪರಿವರ್ತನೆಯನ್ನು ಅವಲೋಕಿಸುವಾ. ಫಿಲಿಪ್ಪನಿಂದ ಕೊಡಲಾದ ದಿವ್ಯ ಸಂದೇಶದ ಬಗೆಗೆ ಆತನು ಏನನ್ನು ತಿಳಿದಿರಲಿಲ್ಲ. ಆತನಿಗೆ, ಕಥೆಯ ಅಸ್ಪಷ್ಟವಾದ ಪರಿಚ್ಛೇದವಾದ ಯೆಶಾಯ ಮತ್ತು “ನೀನು ಓದುವದು ನಿನಗೆ ತಿಳಿಯುವುದೋ” (8:30) ಎಂಬ ಫಿಲಿಪ್ಪನ ಪ್ರಶ್ನೆಯೊಂದಿಗೆ ಪ್ರಾರಂಭವಾಗುತ್ತದೆ. ಆತನು ಬೋಧಕನನ್ನು ರಥದೊಳಕ್ಕೆ ಆಹ್ವಾನಿಸಿದನು, ಅವರು ಪ್ರಯಾಣಿಸುತ್ತಿದಂತೆ ಫಿಲಿಪ್ಪನು ಆತನಿಗೆ “ಯೇಸುವಿನ ವಿಷಯವಾಗಿ ಬೋಧಿಸಿದನು” (ವಚನ 35). ಫಿಲಿಪ್ಪನು ಸುವಾರ್ತೆಯನ್ನು ಬೋಧಿಸಿದನು, ದೇವರ ಶಕ್ತಿಯು ರಕ್ಷಿಸಿತು (ರೋಮಾಪುರ 1:16)! ಖಜಾನೆಯ ಅಧಿಕಾರಿಯು ಈ ಸಂದೇಶವನ್ನು ಕೇಳಿದೊಡನೆ, ಆತನು ನಂಬಿದನು ಮತ್ತು ಅದಕ್ಕೆ ವಿಧೇಯನಾದನು (8:36-39). “ಕೇಳುವುದಕ್ಕಿಂತ ಅನುಭವಿಸುವದು ಒಳ್ಳೆಯದು” ಎಂದು ಆತನು ಯಾರೋ ಒಬ್ಬರಿಂದ ರಕ್ಷಿಸಲ್ಪಡಲಿಲ್ಲ, ಆದರೆ ಬೋಧನೆಯ ಮೂಲಕ ಆತನ ಹೃದಯದಲ್ಲಿ ನಂಬಿಕೆಯು ವೃದ್ಧಿಯಾಯಿತು (ರೋಮಾಪುರ 10:17)! ದೇವರ ಯೋಜನೆಯು ಪ್ರಾಮಾಣಿಕ ಪಾಪಿಯನ್ನು ಮತ್ತು ಬೋಧಕನನ್ನು ಜೊತೆಯಾಗಿಯೇ ತರುವುದೇ ಆಗಿದ್ದು ಮತ್ತು ನಂತರ ವಾಕ್ಯವು ತನ್ನ ಕಾರ್ಯವನ್ನು ಮಾಡಲಿ! ಒಂದು ವೇಳೆ ನೀವು ರಕ್ಷಣೆಯ ಇಚ್ಛೆಯುಳ್ಳವರಾಗಿದ್ದರೆ, ಕೆಲ ರಹಸ್ಯ “ದರ್ಶನಗಳಿಗಾಗಿ” ಕಾಯಬೇಡಿರಿ, ಆದರ ಬದಲಾಗಿ ಸುವಾರ್ತೆಯನ್ನು ಕೇಳಿರಿ ನಂಬಿರಿ, ಮತ್ತು ಅದಕ್ಕೆ ವಿಧೇಯರಾಗಿರಿ!

ಈ ಪ್ರಕರಣದಲ್ಲಿ ದೇವರ ಮಧ್ಯಸ್ಥಿಕೆಯು, ದೂರವಾದ ಪಾಪಿಗಳು ಅದ್ಭುತೀಯ ಅನುಭವಗಳನ್ನು ಹೊಂದಲೇಬೇಕು ಎಂದು ಸಾಧಿಸುವದಿಲ್ಲ. ಇದು ಕಳೆದು ಹೋದವರ ಬಗೆಗೆ ಕಾಳಜಿಯನ್ನು ತೋರಿಸುವುದಾಗಿದೆ, ವಿಶೇಷವಾಗಿ ಕಳೆದು ಹೋದವರು “ಪ್ರಾಮಾಣಿಕರೂ ಮತ್ತು ಒಳ್ಳೆಯ ಹೃದಯಗಳನ್ನು” ಹೊಂದಿರುತ್ತಾರೆ (ಲೂಕ 8:15). ಅದಲ್ಲದೆ ನಂಬುತ್ತೇನೆ (ಮತ್ತಾಯ 7:7, 8). ಸ್ತ್ರೀ ಮತ್ತು ಪುರುಷರು ದೇವರ ಸತ್ಯವನ್ನು ಪ್ರಾಮಾಣಿಕವಾಗಿ ಶೋಧಿಸು

ಪ್ರಯತ್ನಿಸಿದಾಗ, ಪರಿಸ್ಥಿತಿಯಡಿಯಲ್ಲಿ ಕಾಕತಾಳೀಯದಂತೆ ಅವರಿಗೆ ವಿವರಿಸಲಾರದಂತಹ, ಸತ್ಯವನ್ನು ಬೋಧಿಸುವ ಅದು ಪ್ರತಿಯೊಂದು ವ್ಯಕ್ತಿಯ ಸಾಂಗತ್ಯಕ್ಕೆ ಬರುವ ಅನೇಕ ಉದಾಹರಣೆಗಳು ಮನಸ್ಸಿನಲ್ಲಿ ಬರುತ್ತವೆ.[15]

ರಿಕ್ ಆಟ್ಚಲಿಯವರು ವಾಡ್ ಎಂಬ ಯೌವನಸ್ಥನನ್ನು ಟೆಕ್ಸಾಸನ ವಾಕೋದಲ್ಲಿರುವ ರಿಟ್ರಿಟ್‌ನಲ್ಲಿ (ಕೂಟ) ಭೇಟಿಯಾದುದರ ಬಗೆಗೆ ಹೇಳಿದರು, ವಾರ್ಡನು ಬ್ರೂಕ್ಲೆಯ ಓಣಿಗಳಲ್ಲಿ ಬೆಳೆದನು ಆದರೆ ಡಲ್ಲಾಸಗೆ ಹೋದನು. ಡಲ್ಲಾಸಗೆ ತಲುಪಿದಲ್ಲಿದ್ದಾಗ ಒಂದು ದಿನ, ಆತನು ಬಸ್ಸಿನಲ್ಲಿ ಪ್ರಯಾಣಮಾಡುತ್ತಿದ್ದನು ಮತ್ತು ತನ್ನ ಬದಿಯಲ್ಲಿ ಕುಳಿತ ಯೌವನಸ್ಥ ಸ್ತ್ರೀಯೊಂದಿಗೆ ಮಾತನಾಡಲು ಆರಂಭಿಸಿದನು. ಆಕೆಯು ಆತನನ್ನು ಚರ್ಚಿಗೆ ಆಹ್ವಾನಿಸಿದಳು. ವಾರ್ಡನು ಚರ್ಚಿಗೆ ಹೋಗುವವನಲ್ಲ, ಆದರೆ ಆತನು ಡಲ್ಲಾಸದಲ್ಲಿ ಯಾರೋಬ್ಬರನ್ನೂ ತಿಳಿದಿರಲಿಲ್ಲ, ಹೀಗಾಗಿ ಆತನು ಚರ್ಚಿಗೆ ಹೋದನು. ಅಲ್ಲಿನ ಜನರು ಬಲು ಸ್ನೇಹಮನೋ ಭಾವದವರು ಆಗಿದ್ದರು ಯಾಕೆಂದರೆ ಅದು ಸ್ನೇಹಮನೋಭಾವದವರಾಗಿರುವದೂ ಒಂದು ಕಾರ್ಯವಾಗಿರಬೇಕೆಂದು ಆತನು ಯೋಚಿಸಿದನು. ಮುಂದಿನ ವಾರಗಳಲ್ಲಿ ಅವರನ್ನು ನೋಡ ಬೇಕೆಂದು ಆತನು ತಿರುಗಿ ಅಲ್ಲಿಗೆ ಹೋದನು. ಸ್ವಲ್ಪದಿನಗಳಲ್ಲಿಯೇ ಆತನು ಕ್ರೈಸ್ತನಾದನು. ರಿಕ್ ಆಟ್ಚಲಿಯವರು ರಿಟ್ರಿಟ್‌ನಲ್ಲಿ ಮುಂದುವರೆಸುತ್ತಾ ಹೀಗೆ ಹೇಳಿದರು, ವಾರ್ಡನು ಕ್ಯಾಂಪಸ ಸುತ್ತಲೂ ತಿರುಗಾಡುತ್ತಾ "ನೀನು ಕ್ರೈಸ್ತನೋ? ನಾನು ಹೇಗೆ ಕ್ರೈಸ್ತನಾದೆನು ಎಂದು ನಾನು ನಿನಗೆ ಹೇಳಲೇ!"[16] ಎಂದು ಕೇಳುತ್ತಾ ಹೋದನು, ಈ ಕಥೆಯ ಬಗೆಗೆ ಒಂದು ಕ್ಷಣ ಯೋಚಿಸಿರಿ. ವಾರ್ಡನು ಆ ಬಸ್ಸಿನಲ್ಲಿ ಕುಳಿತಾಗ ಆ ಯೌವನಸ್ಥ ಸ್ತ್ರೀಯನ್ನು ಸಂಧಿಸುವದು ಮತ್ತು ಆ ಸ್ತ್ರೀಯು ಆರಾಧನೆಗೆ ಆಮಂತ್ರಿಸುವುದರ ಕುರಿತು ಸ್ವಲ್ಪ ಯೋಚಿಸಿ. ನಾನೊಬ್ಬ ಪ್ರಾಮಾಣಿಕವಾದ ಹುಡುಕುವವನಾಗಿದ್ದರೆ, ದೇವರು ಸತ್ಯವನ್ನು ಕಲಿಯುವವನಿಗೆ ದೈವದತ್ತ ವಾಗಿ ಮಾರ್ಗವನ್ನು ಮಾಡಿಕೊಡುತ್ತಾನೆ ಎಂದು ದೇವವಾಕ್ಯ ಮತ್ತು ನನ್ನ ಅನುಭವಗಳೆರಡೂ ನನಗೆ ಮನವರಿಕೆಮಾಡಿಕೊಟ್ಟಿವೆ!

ನಮ್ಮಲ್ಲಿ ಪ್ರತಿಯೊಬ್ಬರೂ ಪ್ರಾಮಾಣಿಕ ಹೃದಯವನ್ನು ಹೊಂದಿರುವದು (ಲೂಕ 8:15), ದೇವರ ಮಾರ್ಗಗಳನ್ನು ಹುಡುಕುವುದು (ಯೋಹಾನ 5:39; ಅಪೊಸ್ತಲರ ಕೃತ್ಯಗಳು 17:11), ಮತ್ತು *ಸತ್ಯವನ್ನು* ಪ್ರೀತಿಸುವವರೂ (2 ಥೆಸಲೋನಿಕ 2:10) ಆಗಿರುವದು ಎಷ್ಟು ಮಹತ್ವದ್ದಲ್ಲವೇ.

## ಮಾದರಿ ಸಂದೇಶ: ಯೇಸು (8:31-35)

ಬದಲಾದ ಕಂಚುಕಿಯ ಜೀವಿತದ ಸಂದೇಶದ ಕಥೆಯ ಕಡೆಗೆ ನಾವು ತಿರುಗಿಕೊಳ್ಳುವಾ:

> ನೀನು ರಥವನ್ನು ಹತ್ತಿ ನನ್ನ ಬಳಿಯಲ್ಲಿ ಕೂತುಕೋ ಎಂಬುದಾಗಿ ಫಿಲಿಪ್ಪನನ್ನು ಕೇಳಿಕೊಂಡನು ಅವನು ಓದುತ್ತಿದ್ದ ಶಾಸ್ತ್ರವಚನವು ಯಾವುದೆಂದರೆ ಮದ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆ ಆತನು ಒಯ್ಯಲ್ಪಟ್ಟನು; ಕುರಿಮರಿಯು ಉಣ್ಣೆ ಕತ್ತರಿಸುವವನ ಮುಂದೆ ಮೌನವಾಗಿರುವಂತೆ ಆತನು ಬಾಯಿತೆರೆಯಲೇ ಇಲ್ಲ. ಆತನಿಗುಂಟಾದ ದೀನಾವಸ್ಥೆಯಲ್ಲಿ ನ್ಯಾಯವು ಇಲ್ಲದೆ ಹೋಯಿತು ಆತನ ಸಕಾಲದವರನ್ನು ಹೇಳತಕ್ಕದ್ದೇನು? ಆತನ ಜೀವವನ್ನು ಭೂಮಿಯ ಮೇಲಿನಿಂದ ತೆಗೆದುಬಿಟ್ಟರಲ್ಲಾ ಎಂಬುದೆ (8:31ಬಿ-33).

ನಾವು ಓದಿದ ಯೆಶಾಯ 53:7, 8[17] ಈ ಪರಿಚ್ಛೇದದ ಹೃದಯಭಾಗದಲ್ಲಿದದ್ದು ಯೆಶಾಯ ಪುಸ್ತಕದಲ್ಲಿ ಶ್ರಮೆಯ ಸೇವಕ ಎಂಬುದೇ. "ಕಂಚುಕಿಯು ಈ ವಚನವನ್ನು ಕುರಿತು ಪ್ರವಾದಿಯು ಇದನ್ನು ಯಾರ ವಿಷಯದಲ್ಲಿ ಹೇಳಿದ್ದಾನೆ? ತನ್ನ ವಿಷಯದಲ್ಲಿಯೋ? ಮತ್ತೊಬ್ಬನ

ವಿಷಯದಲ್ಲಿಯೋ? ದಯಮಾಡಿ ಹೇಳಬೇಕು ಎಂದು ಫಿಲಿಪ್ಪನನ್ನು ಕೇಳಲು" (ವಚನ 34). ಯೆಹೂದಿ ಬೋಧಕರು ಯೆಶಾಯ 53ರನ್ನು ಅರ್ಥೈಸಿಕೊಳ್ಳಲು ಬಲು ಶ್ರಮಪಟ್ಟರು. ಮೆಸ್ಸೀಯನು ರಾಜನಾಗಿರುತ್ತಾನೆ ಎಂಬುದನ್ನು ಅವರು ಬಲ್ಲವರಾಗಿದ್ದರು. ಪರಿಕಲ್ಪನೆಯ ಜೊತೆಯಲ್ಲಿರುವದು ಅವರು ರಾಜಿಯಾಗುವ ವಿಚಾರವಾಗಿರಲಿಲ್ಲ. ಹೀಗಾಗಿ ಈ ಪರಿಚ್ಛೇದವು ಮೆಸ್ಸಿಯನಿಗೆ ಎಂದು ನಂಬುವವರಾಗಿದ್ದರು, ಇನ್ನುಳಿದ ಪ್ರಶ್ನೆಯೆಂದರೆ "ಇದು ಯಾರಿಗೆ ಅನ್ವಯವಾಗುತ್ತದೆ?" ಎಂಬುದು. ಕೆಲವರು ಹೇಳುವುದೇನೆಂದರೆ ಇದು ಹೆಸರಿಸಲಾರದ ದೇವರ ವಕ್ತಾರನನ್ನು ಸೂಚಿಸುವುದಾಗಿದೆ ಎಂದು (ಬಹುಶಃ ಪ್ರವಾದಿಯಾಗಿರಬೇಕು, ಬಹುಶಃ ಯೆಶಾಯನು ತಾನೇ ಆಗಿರಬೇಕು). ಇತರರು ಬೋಧಿಸುವುದೇನೆಂದರೆ ಈ ಪರಿಚ್ಛೇದವು, ಅವಳ ನಂಬಿಕೆಗಾಗಿ ಶೋಧನೆಗೊಳಗಾದ ಇಸ್ರಾಯೇಲ್ ರಾಷ್ಟ್ರವನ್ನು ಸೂಚಿಸುವ ರೂಪಕವಾಗಿದೆ.

ಖಜಾನೆಯ ಅಧಿಕಾರಿಯ ಗಲಿಬಿಲಿಯು ಫಿಲಿಪ್ಪನಿಗೆ ಒಳ್ಳೆಯ ಆರಂಭಕ್ಕೆ ಪೂರಕವಾಗುತ್ತಾ ಹೋಯಿತು: "ಫಿಲಿಪ್ಪನು ಉಪದೇಶಿಸುವುದಕ್ಕೆ ತೊಡಗಿ ಅದೇ ವಾಕ್ಯವನ್ನು ಆಧಾರ ಮಾಡಿಕೊಂಡು ಅವನಿಗೆ ಯೇಸುವಿನ ವಿಷಯವಾದ ಸುವಾರ್ತೆಯನ್ನು ತಿಳಿಸಿದನು" (ವಚನ 35). ಇದೆಂಥ ಅಮೋಘ ಸಂದೇಶವು ಇದಾಗಿರಬೇಕು!

ಫಿಲಿಪ್ಪನ ಪ್ರಾರಂಭವು ಅಧಿಕಾರಿಯು ಓದುತ್ತಿದ್ದ ಪರಿಚ್ಛೇದದ ಮೂಲಕವಾಗಿತ್ತು. ಸೌವಾರ್ತಿಕನ ಮೊದಲ ಕಾರ್ಯವು ಮೆಸ್ಸೀಯನಿಗೆ ಸೂಚಿತವಾದುದ್ದನ್ನು ಈ ವಚನಗಳು ಸೂಚಿಸುವವಗಳಾಗಿವೆ, ಅವು (ಜನಪ್ರಿಯ ನಂಬುಗೆಗೆ ತದ್ವಿರುದ್ಧವಾದವುಗಳು) ಮೆಸ್ಸೀಯನು ಪರಿಶೋಧನೆಗೆ ಈಡಾಗಲೇ ಬೇಕು ಎಂದು ಯೆಶಾಯನು ಮುಂತಿಳಿಸಿದ್ದೇ ಆಗಿತ್ತು.[18] ಮುಂದೆ, ಫಿಲಿಪ್ಪನು ಯೇಸುವು ಕೇವಲ ಯೇಸುವು ಮಾತ್ರ ಪ್ರತಿಯೊಂದು ಕಾರ್ಯಗಳನ್ನು ನೆರವೇರಿಸಿದನು ಎಂದು ಒತ್ತಿ ಹೇಳಿರಲೇಬೇಕು: "ಕುರಿಯನ್ನು ವಧೆಮಾಡುವಂತೆ," ಯೇಸು ತೋಟದಿಂದ ನ್ಯಾಯಮಂಡಳಿಯೆಡೆಗೆ, ನಂತರ ರೋಮಾ ಅಧಿಕಾರಿಗಳವರೆಗೆ ನಡೆಸಲ್ಪಟ್ಟನು. "ಕುರಿಮರಿಯು ಉಣ್ಣೆಕತ್ತರಿಸುವವನ ಮುಂದೆ ಮೌನವಾಗಿರುವಂತೆ" ಹೀಗೆ ಯೇಸುವಿನ ಎಲ್ಲಾ ಕಷ್ಟಗಳಲ್ಲಿ, ಆತನು ತನ್ನನ್ನು ಸಮರ್ಥಿಸಿಕೊಳ್ಳಲಿಲ್ಲ.[19] ಆತನು ಅಣಕಕ್ಕೊಳಗಾಗುವಂತೆ "ಅವಮಾನಿತನಾದನು" ಉಗಳಿಸಿಕೊಂಡನು, ಮತ್ತು ಮುಖದ ಮೇಲೆ ಹೊಡೆಸಿಕೊಂಡನು. ಒಂದರನಂತರ ಒಂದರಂತೆ ಕಾಯ್ದೆಬಾಹಿರವಾದ ಪ್ರಕ್ರಿಯೆಗಳನ್ನು ಆತನು ಸಹಿಸಿಕೊಳ್ಳಬೇಕಾದ್ದರಿಂದ "ಆತನ ನ್ಯಾಯತೀರ್ಪು ಬದಿಗೊತ್ತಲ್ಪಟ್ಟಿತು."[20] ಆತನು ತನ್ನ ಯೌವನಾವಸ್ಥೆಯಲ್ಲಿ ಅವಸರದ ಮತ್ತು ಘೋರವಾದ ಮರಣ ಹೊಂದಿದ್ದು "ಆತನ ಸಂತತಿಗೆ ತಿಳಿಸುವವರಾರು? ಆತನು ಸಕಾಲದಲ್ಲಿ ಹೇಳತಕ್ಕದ್ದೇನು? ಆತನ ಜೀವವನ್ನು ಭೂಮಿಯ ಮೇಲಿನಿಂದ ತೆಗೆದುಬಿಟ್ಟರಲ್ಲಾ"[21] ಎಂಬ ಮಾತುಗಳಲ್ಲಿ ಸೂಚಿತವಾಗಿದೆ.

ಯೇಸುವಿನ ಜೀವಿತದಲ್ಲಿ ಯೆಶಾಯ 53ರಲ್ಲಿನ ಇನ್ನೂ ಇತರ ಪ್ರವಾದನೆಗಳು ನೆರವೇರಿದ್ದನ್ನು ಫಿಲಿಪ್ಪನು ಗಮನಿಸಿದ್ದನು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆತನು ತನ್ನ ಜನರಿಂದ ತಿರಸ್ಕರಿಸಲ್ಪಟ್ಟಿದ್ದನು (ಯೆಶಾಯ 53:1-3). ಆತನು ಉಪದ್ರವಕ್ಕೀಡಾದನು (ವಚನ 5). ಆತನು ಇಬ್ಬರು ಕಳ್ಳರ ಮಧ್ಯದಲ್ಲಿ ತೂಗುಹಾಕಲ್ಪಟ್ಟನು (ವಚನಗಳು 9, 12), ಆತನು ಶ್ರೀಮಂತ ವ್ಯಕ್ತಿಯ ಸಮಾಧಿಯಲ್ಲಿ ಹೂಣಲ್ಪಟ್ಟನು (ವಚನ 9). ಎಲ್ಲಕ್ಕಿಂತ ಮೇಲಾಗಿ, ಯಾಕೆ ಮೆಸ್ಸೀಯನು ಮರಣಹೊಂದಬೇಕು ಯಾಕೆಂದರೆ ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸಲು ಎಂದು ಫಿಲಿಪ್ಪನು ಗಮನಿಸಿದ್ದನು!

> ... ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾದಗಳ ನಿಮಿತ್ತ ಅವನು ಜಜ್ಜಲ್ಪಟ್ಟನು ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು. ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು, ಪ್ರತಿಯೊಬ್ಬನೂ ತನ್ನ ತನ್ನ

ದಾರಿಯನ್ನು ಹಿಡಿಯುತ್ತಿದ್ದನು; ನಮ್ಮೆಲ್ಲರ ದೋಷಫಲವನ್ನೂ ಯೆಹೋವನು ಅವನ ಮೇಲೆ ಹಾಕಿದನು.

... ಅವನನ್ನು ಜಜ್ಜುವದು ಯೆಹೋವನ ಸಂಕಲ್ಪವಾಗಿತ್ತು. ಆತನು ಅವನನ್ನು ವ್ಯಾಧಿಯಿಂದ ಭಾದಿಸಿ ಹೀಗೆಂದುಕೊಂಡನು; ಇವನು ತನ್ನ ಆತ್ಮವನ್ನು ಪ್ರಾಯಶ್ಚಿತ ಯಜ್ಞಕ್ಕಾಗಿ ಒಪ್ಪಿಸಿದ ಮೇಲೆ ತನ್ನ ಸಂತಾನವನ್ನು ನೋಡುವನು, ಚಿರಂಜೀವಿ ಯಾಗುವನು, ನನ್ನ ಸಂಕಲ್ಪವು ಇವನ ಕೈಯಿಂದ ನೆರವೇರುವದು; ತನ್ನ ಆತ್ಮವು ಅನುಭವಿಸಿದ ಶ್ರಮೆಯ ಫಲವನ್ನು ಕಂಡು ತೃಪ್ತನಾಗುವನು; ಧರ್ಮಾತ್ಮನಾದ ನನ್ನ ಸೇವಕನು ತನ್ನ ಜ್ಞಾನದ ಮೂಲಕ ಬಹು ಜನರನ್ನು ಧರ್ಮಮಾರ್ಗಕ್ಕೆ ತರುವನು ಅವರ ಅಪರಾಧಗಳನ್ನು ಹೊತ್ತು ಕೊಂಡು ಹೋಗುವನು. ಇವನು ಇಂಥವನಾಗಿರುವುದರಿಂದ ನಾನು ಇವನಿಗೆ ದೊಡ್ಡವರ ಸಂಗಡಪಾಲು ಕೊಡುವೆನು, ಇವನು ಬಲಿಷ್ಟರೊಡನೆ ಸೂರೆಯನ್ನು ಹಂಚಿಕೊಳ್ಳುವನು; ತನ್ನ ಪ್ರಾಣವನ್ನು ಧಾರೆ ಯೆರೆದು ಮರಣಹೊಂದಿ ದ್ರೋಹಿಗಳೊಂದಿಗೆ ತನ್ನನ್ನೂ ಎಣಿಸಿಕೊಂಡು ಬಹು ಜನ ದ್ರೋಹಿಗಳ ಪಾಪವನ್ನು ಹೊರುತ್ತಾ ಅವರಿಗಾಗಿ ವಿಜ್ಞಾಪನೆಮಾಡಿದನಲ್ಲಾ (ಯೆಶಾಯ 53:5, 6, 10-12).

ಯೆಶಾಯ 53ರ: ವಾಕ್ಯವನ್ನು ಮೂಲಧಾರವಾಗಿಟ್ಟುಕೊಂಡು ಫಿಲಿಪ್ಪನು ಯೇಸುವನ್ನು ಬೋಧಿಸಿದನು ಎಂಬುದನ್ನು ಲೂಕನು ಗಮನಿಸುತ್ತಾನೆ (ಅಪೊಸ್ತಲರಕೃತ್ಯಗಳು 8:35; ಒತ್ತಿ ಹೇಳಿದ್ದು ನನ್ನದು). ಇತರ ವಾಗ್ಮಿಗಳಂತೆ, ಸೌವಾರ್ತಿಕನು ಯೇಸುವಿನ ಜನನ, ಜೀವನ, ಮತ್ತು ಅದ್ಭುತಗಳನ್ನು ಸೌವಾರ್ತಿಕನಂತೆ ಪುನರಾವರ್ತನೆ ಮಾಡಿರಬಹುದು: "ದೇವರು ಅವನ ಸಂಗಡ ಇದ್ದುದರಿಂದ ಅತನು ಉಪಕಾರಗಳನ್ನು ಮಾಡುತ್ತಾ ಸೈತಾನನಿಂದ ಭಾದಿಸಲ್ಪಡುತ್ತಿರುವವ ರೆಲ್ಲರನ್ನೂ ಗುಣಮಾಡುತ್ತಾ ಸಂಚರಿಸಿದನು" (10:38).[22]

ಕಂಚುಕಿಯು ಯೆರೂಸಲೇಮಿನಲ್ಲಿರುವುದರಿಂದ, ಯೇಸುವಿನ ಹೆಸರು ಆತನಿಗೆ ಯಾವ ರೀತಿಯಲ್ಲಿಯೂ ಹೊಸದಾಗಿ ಇರಲಿಲ್ಲ. ಸಭೆಯ ಅನಿರೀಕ್ಷಿತ ಬೆಳವಣಿಗೆಯಲ್ಲಿ ಸೌಲನ ಹಿಂಸೆಯ ತೀವ್ರತೆ ಮತ್ತು ಆವೇಶವು ಹಿಂಬಾಲಿಸಿದರೂ, ಪ್ರತಿಯೊಬ್ಬರ ತುಟಿಯ ಮೇಲೆ ಯೇಸುವಿನ ಹೆಸರು ಇರಿಸಿರಬಹುದು. ಕೆಲವರು ಆತನನ್ನು ಶಪಿಸಿದರು; ಕೆಲವರು ಆತನನ್ನು ನೆನಿಪಿಸಿಕೊಂಡರು; ಆದರೆ ಆತನು ಅವರ ಮಧ್ಯದಲ್ಲಿ ಎಲ್ಲಾ ವಿಷಯಗಳನ್ನು ಪುನ ರಾವರ್ತಿಸುವಂತೆ ಮಾಡಿದನು. ಫಿಲಿಪ್ಪನು ಯೇಸುವಿನ ಬಗೆಗೆ ಹೇಳಿದ್ದು ನಿಜ ಎಂಬುದನ್ನು ಖಂಜಾಚಿಯು ತಿಳಿದಿದ್ದನು. ಫಿಲಿಪ್ಪನು ಈ ಸಂಗತಿಗಳನ್ನು ಯೆಶಾಯನ ಪ್ರವಾದನೆಯೊಂದಿಗೆ ಸಂಬಂಧವನ್ನು ಕಲ್ಪಿಸಿದಾಗ, ಕಂಚುಕಿಯ ಮನದಲ್ಲಿ ತಿಳುವಳಿಕೆಯು ಬಂದಿತು ಮತ್ತು ನಂಬಿಕೆಯು ಆತನ ಹೃದಯದಲ್ಲಿ ಬಂದಿತು.

## ಮಾದರಿ ಪ್ರತಿಕ್ರಿಯೆ ಶೀಘ್ರ ವಿಧೇಯತೆ (8:36-39)

ಇದು ನಮ್ಮಲ್ಲಿ ಮಾದರಿಯ ಪ್ರತಿಕ್ರಿಯೆಯನ್ನು ತರುವುದೇ ಆಗಿದೆ. ಫಿಲಿಪ್ಪನು ಯೇಸುವಿನ ಬಗೆಗೆ ಬೋಧಿಸುವಾಗ, ಆತನು ಕೇವಲ ಯೇಸುವಿನ ಬಗ್ಗೆ ಮಾತ್ರ ಬೋಧಿಸಲಿಲ್ಲ. ಯೇಸು ಮನುಕುಲಕ್ಕೆ ಏನು ಮಾಡಿದನು ಅವುಗಳು ವೈಯಕ್ತಿಕವಾಗಿ ಹೇಗೆ ಉಪಕಾರವಾಗಿವೆ ಎಂಬುದರ ಬಗೆಗೂ ಆತನು ಬೋಧಿಸಿದನು: ಆತನು ದೇವರ ರಾಜ್ಯ (ಸಭೆಯ), ಯೇಸುಕ್ರಿಸ್ತನ ನಾಮ, ಮತ್ತು ದೀಕ್ಷಾಸ್ನಾನ ಇವುಗಳ ಬಗೆಗೆ ಬೋಧಿಸಿದನು (8:5, 12). ಖಜಾಂಚಿಗೆ ಫಿಲಿಪ್ಪನ ಸಂದೇಶವು ಅದೇ ರೀತಿಯದ್ದಾಗಿದ್ದು, ಅಧಿಕಾರಿಯ ಪ್ರತಿಕ್ರಿಯೆಗೆ ನಿಶ್ಚಯವಾಗಿತ್ತು: "ಅವರು ದಾರಿಯಲ್ಲಿ ಹೋಗುತ್ತಿರುವಾಗ ನೀರಿನ[23] ಬಳಿಗೆ ಬಂದರು ಕಂಚುಕಿಯು ಅಗೋ! ನೀರು; ನನಗೆ ದೀಕ್ಷಾಸ್ನಾನವಾಗುವುದಕ್ಕೆ ಅಡ್ಡಿ ಏನು?" (ವಚನ 36) ಎಂದನು.

ದೀಕ್ಷಾಸ್ನಾನದ[24] ಬಗೆಗೆ ಹೇಳದೇ ಯೇಸುವಿನ ಬಗೆಗೆ ಸಂಪೂರ್ಣವಾಗಿ ಬೋಧಿಸುವದು

ಇದು ಅಸಾದ್ಯವಾದ ಮಾತಾಗಿದೆ. ಯೇಸುವಿನ ಮಾರ್ಗವನ್ನು ಸಿದ್ಧಮಾಡಲೆಂದು ಬಂದ ಯೋಹಾನನು, ದೀಕ್ಷಾಸ್ನಾನಮಾಡಿಸಿದನು (ಯೋಹಾನ 1:30, 31) ಯೇಸುವು ತಾನೇ ದೀಕ್ಷಾಸ್ನಾನಕ್ಕಾಗಿ ಅರವತ್ತು ಮೈಲಿಗಿಂತ ಹೆಚ್ಚಾಗಿ ನಡೆಯುತ್ತಾ ಹೋದನು (ಮತ್ತಾಯ 3:13). ಯೇಸುವಿನ ಶಿಷ್ಯರು ಯೋಹಾನನಿಗಿಂತ ಹೆಚ್ಚು ಜನರಿಗೆ ದೀಕ್ಷಾಸ್ನಾನಕೊಟ್ಟರು (ಯೋಹಾನ 4:1, 2). ನಾವೆಲ್ಲರೂ ನೀರಿನಿಂದ ತಿರುಗಿ "ಹುಟ್ಟಲೇಬೇಕು" ಎಂದು ಯೇಸು ಹೇಳಿದನು (ಯೋಹಾನ 3:3, 5) ಮತ್ತು ದೀಕ್ಷಾಸ್ನಾನವನ್ನು ಆಜ್ಞಾಪಿಸಿದ್ದಾನೆ (ಮಾರ್ಕ 16:16). ಯೇಸುವಿನ ಶಿಷ್ಯರು ಆತನ ಹೆಸರಿನ ಮೇಲೆ ದೀಕ್ಷಾಸ್ನಾಮಾಡಿಸಿಕೊಂಡರು (ಅಪೊಸ್ತಲರಕೃತ್ಯಗಳು 2:38). ದೀಕ್ಷಾಸ್ನಾನವು ನಮ್ಮನ್ನು ಯೇಸುವಿನಲ್ಲಿ ಇರಿಸುತ್ತದೆ (ಗಲಾತ್ಯ 3:26, 27) ಮತ್ತು ಆತನ ದೇಹದಲ್ಲಿ ಇರಿಸುತ್ತದೆ (1 ಕೊರಿಂಥ 12:13).

ತಾನು ದೀಕ್ಷಾಸ್ನಾನವಾಗಬೇಕೆಂದು ಯೇಸು ಬಯಸುತ್ತಾನೆ ಕಂಚುಕಿಯು ಅರಿತುಕೊಂಡಾಗ, ಆತನು ತಡಮಾಡ ಬಯಸಲಿಲ್ಲ. "ಕಂಚುಕಿಯು ಅಗೋ! ನೀರು; ನನಗೆ ದೀಕ್ಷಾಸ್ನಾನವಾಗುವುದಕ್ಕೆ ಅಡ್ಡಿ ಏನು?" (ವಚನ 36). ಎಂಬ ಆತನ ಮಾತಿನಲ್ಲಿನ ಉದ್ರೇಕವನ್ನು ನೀನು ಕೇಳಲಿಲ್ಲವೋ? "ನೋಡು! ನನ್ನ ಮುಣುಗುವಿಕೆಗೆ ಇಷ್ಟು ಆಳದ ನೀರು ಸಾಕೇ! ಅದನ್ನು ಈಗಲೇ ಮಾಡೋಣ!" ಕೆಲವರು, ಹೊರಗಿನ ಮಾರ್ಗಗಳನ್ನು ನೋಡು ತ್ತಿರುವಾಗ, ಕಂಚುಕಿಯು ಒಳಗಿನ ಮಾರ್ಗವನ್ನು ನೋಡಿದನು.[25]

"ಯೇಸು ಒತ್ತಿ ಹೇಳಿದೇನೆಂದರೆ ಯಾರು ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವರು ರಕ್ಷಣೆಹೊಂದುವರು" (ಮಾರ್ಕ 16:16). ನಂಬುಗೆಯು ದೀಕ್ಷಾಸ್ನಾನದತ್ತ ನಡೆಸುವುದಾಗಿದೆ.[26] ಫಿಲಿಪ್ಪನು ಖಜಾಂಚಿಗೆ ದೀಕ್ಷಾಸ್ನಾನಕೊಡುವುದಕ್ಕಿಂತ ಖಜಾಂಚಿಯು ನಿಜವಾಗಿ ಯೇಸುವಿನಲ್ಲಿ ನಂಬಿಕೆ ಹೊಂದಿದ್ದಾನೋ ಎಂದು ಮುಂಚೆಯೇ ಆತನು ಖಚಿತಪಡಿಸಿಕೊಂಡಿದ್ದನು. ವಚನ 37 ಹೇಳುವುದೇನೆಂದರೆ ಅಂತರ್ ಬದಲಾವಣೆಯು ಬಹುಶಃ ಫಿಲಿಪ್ಪಿ ಮತ್ತು ಕಂಚುಕಿಯ ಮದ್ಯದಲ್ಲಿ ಸ್ಥಾನಪಡೆದಿತ್ತು; "[ಮತ್ತು ಫಿಲಿಪ್ಪನು, ನೀನು ನಿನ್ನೆಲ್ಲಾ ಹೃದಯದಿಂದ ನಂಬಿದ್ದಾದರೆ, ನೀನು ಮಾಡಿಸಿಕೊಳ್ಳಬಹುದು ಎಂದು ಹೇಳಿದನು, ಮತ್ತು ಆತನು ಉತ್ತರವಾಗಿ ಹೇಳಿದೇನೆಂದರೆ ಯೇಸು ದೇವರ ಮಗನು ಎಂದು ನಾನು ನಂಬುತ್ತೇನೆ.]" NASBಯಲ್ಲಿ ಈ ಪದಗಳು "ಅನೇಕ ಹಸ್ತ ಪ್ರತಿಗಳಲ್ಲಿ ಈ ವಾಕ್ಯವು ಇಲ್ಲ" ಎಂಬ ಅಡಿನುಡಿಯೊಂದಿಗೆ ಕಂಸದಲ್ಲಿವೆ. *ಅನೇಕ ಪಂಡಿತರು ಈ ವಚನಗಳು ಮೂಲವೇದಭಾಗದ ಭಾಗಗಳಾಗಿಲ್ಲ ಎಂದು ನಂಬುವವರಾಗಿದ್ದಾರೆ.*[27] ಆದರೆ ಇದು ದೀಕ್ಷಾಸ್ನಾನಮಾಡಿಸುತ್ತಿರಲಿಲ್ಲ. ದೀಕ್ಷಾಸ್ನಾನದ ನಂಬಿಕೆಗೋಸ್ಕರ ಎಂದು ಅವರು ಹೇಗೆ ಕಂಡು ಹಿಡಿಯುತ್ತಿದ್ದರು? ಒಬ್ಬ ಪಾಪಿಯು ನಂಬಿದರೆ ಅದು ಹೆಚ್ಚು ಸ್ವಾಭಾವಿಕವಾದದೋ ಮತ್ತು ಒಬ್ಬ ಪಾಪಿಯು ಪ್ರತ್ಯುತ್ತರಿಸಿದಾಗ ಅದು ಇನ್ನೂ ಹೆಚ್ಚು ಸ್ವಾಭಾವಿಕವಾದದೋ ಯಾವುದು?

ನಂಬಿಕೆಯ ಮೌಖಿಕ ಪ್ರತಿಕ್ರಿಯೆಯು "ಅರಿಕೆ"[28] ಎಂದು ಕರೆಯಲ್ಪಡುತ್ತದೆ - ಇದು ಬೈಬಲನ ಒಂದು ಮಹತ್ವದ ಬೋಧನೆಯಾಗಿದೆ (ಮತ್ತಾಯ 10:32, 33; 16:16; ಯೋಹಾನ 9:22; 12:42; 1 ತಿಮೊಥೆ 6:12, 13; ಇಬ್ರಿಯ 3:1; 10:23; 1 ಯೋಹಾನ 4:2, 15).[29] ಅರಿಕೆಯು, ದೀಕ್ಷಾಸ್ನಾನಕ್ಕಿಂತ[30] ಮುಂಚೆ ಒಂದಕ್ಕಿಂತ ಹೆಚ್ಚು ಸಾರೆ ನಡೆಯುವ ಸಂಗತಿಯಾಗಿದ್ದರೂ, ದೇವವಾಕ್ಯ ಮತ್ತು ಆದಿ ಸಭೆಯ ಇತಿಹಾಸವು ಒಬ್ಬನು ದೀಕ್ಷಾಸ್ನಾನ ಹೊಂದಬೇಕಾದರೆ ಯೇಸುವಿನಲ್ಲಿನ ನಂಬಿಕೆಯ ಪ್ರಕಟಣೆಯು ಅವಶ್ಯವಾಗಿದೆ ಎಂದು ಸೂಚಿಸುವುದಾಗಿದೆ. 2:38ನ್ನು ನಾವು ಅಭ್ಯಾಸಿಸಿದಾಗ, ವೇದಭಾಗವು ಜನರು "ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದಬೇಕು" ಎಂಬುದಾಗಿ ಅಕ್ಷರಸಹ ಹೇಳುವುದನ್ನು ನಾವು ಗಮನಿಸುವವರಾಗಿದ್ದೇವೆ ಮತ್ತು ಅನೇಕ ಪಂಡಿತರು ನಂಬುವುದೇನೆಂದರೆ ಮೂರು ಸಾವಿರ ಜನರು ಯೇಸು ಕ್ರಿಸ್ತನಲ್ಲಿನ ತಮ್ಮ ನಂಬಿಕೆಯನ್ನು ನೀರಿನಲ್ಲಿ ಹೋಗುವ ಮುಂಚೆ ಪ್ರಕಟಿಸಿದರು ಎಂದು ಸೂಚಿಸುವವರಾಗಿದ್ದಾರೆ. ರೋಮಾಪುರ 10:9, 10 ತುಟಿಯ ಮೇಲಿನ

ನಂಬಿಕೆಯ ಜೊತೆ ಹೃದಯದಲ್ಲಿನ ನಂಬಿಕೆಯನ್ನು ಜೋಡಿಸಿದ್ದಾರೆ:

> ... ಯೇಸುವನ್ನೆ ಕರ್ತನೆಂದು ಬಾಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ. ಹೃದಯದಿಂದ ನಂಬುವುದರ ಮೂಲಕ ನೀತಿಯು ದೊರಕುತ್ತದೆ. ಬಾಯಿಂದ ಅರಿಕೆ ಮಾಡುವುದರ ಮೂಲಕ ರಕ್ಷಣೆಯಾಗುತ್ತದೆ.

ನಂಬಿಕೆ ಮತ್ತು ಅರಿಕೆಗಳೆರಡು ಜೋಡಿಸಲ್ಪಟ್ಟಿವೆ ಎಂಬುದನ್ನು ಗಮನಿಸಿರಿ, ಇವೆರಡೂ ರಕ್ಷಣೆಗೆ ಅವಶ್ಯವಾಗಿವೆ, ಮತ್ತು ಇವೆರಡೂ ರಕ್ಷಣೆಗಿಂತ ಮುಂಚಿತವಾಗಿ ನಡೆಯುವ ಸಂಗತಿಗಳಾಗಿವೆ. ಎರಡೂ ರಕ್ಷಣೆಗಿಂತ ಮುಂಚೆ ನಡೆಯಬೇಕಾದ್ದರಿಂದ ಮತ್ತು ದೀಕ್ಷಾಸ್ನಾನದ ವಿಚಾರದಲ್ಲಿ ನಾವು ಕ್ರಿಸ್ತನ ರಕ್ತದಿಂದ ರಕ್ಷಿಸಲ್ಪಟ್ಟಿರುವುದರಿಂದ, ಈ ಎರಡೂ ದೀಕ್ಷಾಸ್ನಾನಕ್ಕಿಂತ[31] ಮುಂಚೆ ನಡೆಯುವಂತವುಗಳಾಗಿವೆ.[32]

ದೀಕ್ಷಾಸ್ನಾನಕ್ಕಿಂತ ಮುಂಚೆ ಜನರು ಏನನ್ನು ಅರಿಕೆ ಮಾಡುತ್ತಾರೆ ಎಂಬುದರ ವಿಷಯವಾಗಿ, ಅಲ್ಲಿ ಯಾವುದೇ ಸಿದ್ಧಪಡಿಸಿದ ಸೂತ್ರವು ಇಲ್ಲ. ಮತ್ತಾಯ 10:32 ಕ್ರಿಸ್ತನ ಅರಿಕೆಯ ಬಗೆಗೆ ಮಾತನಾಡುವುದಾಗಿದೆ. ಮತ್ತಾಯ 16:16ರಲ್ಲಿ ಪೇತ್ರನು ಯೇಸುವಿಗೆ ಅರಿಕೆ ಮಾಡುತ್ತಾನೆ. "ನೀನು ಬರಬೇಕಾಗಿರುವ ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು" ಅಪೊಸ್ತಲರಕೃತ್ಯಗಳು 8:37 ಆದಿ ಸಭೆಯಲ್ಲಿ ಇರಬಹುದಾದಂಥ "ಯೇಸು ಕ್ರಿಸ್ತನು ದೇವರ ಕುಮಾರನು ಎಂದು ನಾವು ನಂಬುತ್ತೇನೆ" ಎಂಬ ಲಾಕ್ಷಣಿಕವಾದ ಅರಿಕೆಯನ್ನು ಇದು ಸೂಚಿಸುವುದಾಗಿದೆ. ಇವೆಲ್ಲವುಗಳನ್ನು ಒಟ್ಟಾಗಿ ಇಡುವುದರ ಜೊತೆಗೆ, ನಮಗೆ ಯೇಸುವು ರಕ್ಷಕನು,[33] ಅಭಿಶಕ್ತನು (ಅಂದರೆ, ನಮ್ಮ ರಾಜನು) ಎಂದು ಅರಿಕೆ ಮಾಡುವದು ನಮಗೆ ಅವಶ್ಯವಿದೆ, ಮತ್ತು ಅದು ಅದ್ವಿತೀಯವಾದುದ್ದು! ಇಂಥ ಅರಿಕೆಗಳು ಕೇವಲ ಹೇಳಿಕೆಗಳ ಸಂಗತಿಗಳಾಗಿರುವುದಿಲ್ಲ; ಇದು ದೇವರಿಗೆ ಒಪ್ಪಿಸಿಕೊಳ್ಳುವಿಕೆಯಾಗಿದೆ! ನಾವು ನಮ್ಮನ್ನು ಆತನ ಕೈಗಳಲ್ಲಿ ಇರಿಸುತ್ತೇವೆ ಮತ್ತು ಆತನ ಆಜ್ಞೆಗಳಿಗೆ ಬದ್ಧರಾಗಿರುವಂತೆ ನಮ್ಮನ್ನು ನಾವು ಒಪ್ಪಿಸಿಕೊಡೋಣ.

ಫಿಲಿಪ್ಪಿನು ಕಂಚುಕಿಯನ್ನು ಆತನ ಜೀವಿತದ ಬಗೆಗೆ ಅಥವಾ ಆತನು ಅರಿತುಕೊಂಡ ಬೈಬಲಿನ ಶ್ರೇಷ್ಟ ಸಿದ್ಧಾಂತಗಳ ಬಗೆಗೆ ಪ್ರಶ್ನಿಸಲಿಲ್ಲ. ದೀಕ್ಷಾಸ್ನಾನಕ್ಕೆ ಹೊರಟಿರುವ ವ್ಯಕ್ತಿಗೆ "ನಿನ್ನ ಹೃದಯದಿಂದ ಯೇಸುವನ್ನು ದೇವರ ಮಗನೆಂದು ನಂಬುವೆಯಾ?"[34] ಎಂಬ ಒಂದೇ ಒಂದು ಪ್ರಶ್ನೆಯನ್ನು ಕೇಳಲು ನಮಗೆ ಹಕ್ಕಿದೆ. ದೀಕ್ಷಾಸ್ನಾನ ಹೊಂದಿದ ಪ್ರತಿಯೊಬ್ಬ ವ್ಯಕ್ತಿಯು ತಪ್ಪು ಕಲ್ಪನೆಯೊಂದಿಗೆ ಮತ್ತು ಹೆಚ್ಚಿನ ಬದಲಾವಣೆಯ ಕಲ್ಪನೆಯಿಂದ ಬರುತ್ತಾನೆ. ಆತನು ಜೀವಿತಾವಧಿಯನ್ನು ಹೊಂದಿರುತ್ತಾನೆ, ಹೇಗೂ, ದೇವರ ಸಹಾಯದೊಂದಿಗೆ ಮತ್ತು ಆತನ ಸಹೋದರರೊಂದಿಗೆ ತನ್ನ ತಿಳುವಳಿಕೆಯನ್ನು ಮತ್ತು ನಡಾವಳಿಕೆಯನ್ನು ತಿದ್ದಿಕೊಳ್ಳುವ ಕೆಲಸವನ್ನು ಮಾಡುತ್ತಿರುತ್ತಾನೆ (ಮತ್ತಾಯ 28:19, 20).

ಫಿಲಿಪ್ಪನು ಕಂಚುಕಿಗೆ "ಮುಂದಿನ ಭಾನುವಾರದವರೆಗೆ ಕಾಯಬೇಕಾಗುವದು"[35] ಎಂದು ಹೇಳಿರಲಿಲ್ಲ ಎಂಬುದನ್ನು ಗಮನಿಸಿರಿ. ಹೊಸ ಒಡಂಬಡಿಕೆಯ ಸಮಯದಲ್ಲಿ, ತಾವೇನು ಮಾಡಬೇಕೆಂದು ಪಾಪಿಗಳು ತಿಳಿದುಕೊಂಡಾಗ ತಕ್ಷಣ ಅದನ್ನು ಅವರು ಅಲ್ಲಿಯೇ ಮಾಡಿದರು. ಕಂಚುಕಿಯು ಒಪ್ಪಿಕೊಂಡ ಕೂಡಲೇ ಫಿಲಿಪ್ಪನು ಆತನಿಗೆ ದೀಕ್ಷಾಸ್ನಾನ ಕೊಡಲು ಸಿದ್ಧನಾದನು, "ಆತನು ರಥವನ್ನು ನಿಲ್ಲಿಸು ಎಂದು ಅಪ್ಪಣೆ ಕೊಟ್ಟನು;[36] ಫಿಲಿಪ್ಪನೂ ಕಂಚುಕಿಯೂ ಇಬ್ಬರೂ ನೀರಿನೊಳಗೆ ಇಳಿದರು. ಫಿಲಿಪ್ಪನು ಅವನಿಗೆ ದೀಕ್ಷಾಸ್ನಾನಮಾಡಿಸಿದನು" (8:38).

2:38ನ್ನು ನಾವು ಅಭ್ಯಾಸಿಸುವಾಗ, ದೀಕ್ಷಾಸ್ನಾನ ಎಂಬ ಪದದ ಭಾಷಾಂತರವಾದ ಗ್ರೀಕ್ ಪದದ ಅಕ್ಷರಸಹ ಅರ್ಥವು "ಮುಳುಗಿಸು" ಎಂದಾಗಿದೆ. ಹೇಗೂ, ದೀಕ್ಷಾಸ್ನಾನ ಎಂದರೆ

ಮುಳುಗಿಸುವುದು ಎಂದು ತಿಳಿದುಕೊಳ್ಳಲು ನಾವು ಗ್ರೀಕ್ ಕಲಿಯಲೇಬೇಕು ಎಂದೇನಲ್ಲಾ. ಆದರೆ ಹೊಸ ಒಡಂಬಡಿಕೆಯ ಸಮಯದಲ್ಲಿ ಜನರು ಹೇಗೆ ದೀಕ್ಷಾಸ್ನಾನ ಹೊಂದಿದರೆಂದು ನೋಡಿಕೊಂಡರೆ ಸಾಕು.[37] ಫಿಲಿಪ್ಪಿ ಮತ್ತು ಖಜಾಂಚಿಯು ನೀರಿನ ಬಳಿಗೆ ಬಂದರು (8:36), ಬೋಧಕನು ಅಧಿಕೃತವಾಗಿ ಎಲ್ಲಿ ದೀಕ್ಷಾಸ್ನಾನ ಮಾಡಿಸಬೇಕಿತ್ತೋ ಅಲ್ಲಿ ಅವರು (ವಚನ 38) ಮತ್ತು ನಂತರ ಅವರು ನೀರಿನಿಂದ ಮೇಲಕ್ಕೆ ಬಂದರು (ವಚನ 39).[38] ಈ ಪದಗಳು ಮುಳುಗಿಸುವಿಕೆಗೆ ಬಳಸುವ ಪೂರಕಪದಗಳಾಗಿವೆ ಹೊರತು ನೀರನ್ನು ಸುರಿಯುವದು ಪ್ರೋಕ್ಷಿಸುವ ಅಭ್ಯಾಸಗಳಿಗಲ್ಲ. J. W. McGarvey ಬರೆಯುವಂತೆ,

> ಪ್ರೋಕ್ಷಿಸುವ ಅಭ್ಯಾಸವನ್ನು ಹೊಂದಿದ ಫಿಲಿಪ್ಪಿ ಮತ್ತು ಕಂಚುಕಿಯರನ್ನು ಹೊರಗಿಡುತ್ತಾರೆ. ಇನ್ನೊಂದೆಡೆಯಲ್ಲಿ, ಈಗ ಯಾರು ಮುಳುಗಿಸುವ ಅಭ್ಯಾಸವನ್ನು ಹೊಂದಿರುತ್ತಾರೋ ಅವರು ಫಿಲಿಪ್ಪಿ ಮತ್ತು ಕಂಚುಕಿಯು ಮಾಡಿದ ಹಾಗೆ ಮಾಡು ತ್ತಾರೆ; ಮತ್ತು ಪಕ್ಷಪಾತವಿಲ್ಲದ ಮನಸ್ಸು ಈ ತೀರ್ಮಾನದಿಂದ ತಪ್ಪಿಸಿಕೊಳ್ಳಲು ಸಾದ್ಯವಿಲ್ಲ.[39] ಕೆಲವರು ಹೇಳುವಂತೆ, ದೇಹದ ಒಂದು ಭಾಗವನ್ನು ಮುಳುಗಿಸಬೇಕೆಂದು ಮತ್ತು ಇನ್ನೊಂದು ಭಾಗವನ್ನು ಪ್ರೋಕ್ಷಿಸುವದು ಎಂಬುವಂತದ್ದು ವಿಚಾರಹೀನ ಮಾತಾಗಿದೆ.

ಇದು ಸರಿಯಾಗಿ ಸಂಸ್ಥಾಪಿತವಾದ ಇತಿಹಾಸದ ನಿಜಾಂಶವಾಗಿದ್ದು ಅದು ಅಪೋಸ್ಟೇಟ್ ಚರ್ಚ್ ಚಿಮಿಕಿಸುವುದರ ಅಭ್ಯಾಸವನ್ನು ತರುವ ಮೊದಲು ಸಭೆಯು ಕೇವಲ ನೂರಾರು ವರ್ಷಗಳಿಂದ ಮುಳುಗಿಸುವ ಅಭ್ಯಾಸವನ್ನು ಹೊಂದಿತ್ತು. ನಾನು ಯೂರೋಪಿನ ಅನೇಕ ಭಾಗಗಳಿಗೆ ಪ್ರಯಾಣ ಮಾಡಿದ್ದೇನೆ ಮತ್ತು ಪ್ರಾಚೀನ ಕಾಲದಿಂದಲೂ ಉಳಿದಿರುವ ಮುಳುಗಿಸಿ ದೀಕ್ಷಾಸ್ನಾನ ಮಾಡಿಸಲೆಂದು ಕಟ್ಟಲ್ಪಟ್ಟ ಸ್ಥಳಗಳನ್ನು ನೋಡಿದ್ದೇನೆ. ಫಿಲಿಪ್ಪನು ಕಂಚುಕಿಯನ್ನು ದೀಕ್ಷಾಸ್ನಾನಮಾಡಿಸಿದ ರೀತಿಯು ಕಡ್ಡಾಯವಾಗಿತ್ತೇ ಹೊರತು ಆಯ್ಕೆಯಾಗಿರಲಿಲ್ಲ.

ಫಿಲಿಪ್ಪನು ಖಜಾನೆಯ ಅಧಿಕಾರಿಯನ್ನು ಮುಳುಗಿಸಿದ ನಂತರ "ಅವರು ನೀರನ್ನು ಬಿಟ್ಟು ಮೇಲಕ್ಕೆ ಬಂದಾಗ ಕರ್ತನ ಆತ್ಮ ಫಿಲಿಪ್ಪನನ್ನು ಎತ್ತಿಕೊಂಡು ಹೋಗಲಾಗಿ ಕಂಚುಕಿಯು ಸಂತೋಷವುಳ್ಳವನಾಗಿ ತನ್ನ ದಾರಿಯನ್ನು ಹಿಡಿದು ಅವನನ್ನು ಕಾಣಲೇ ಅಲ್ಲ" (ವಚನ 39ಎ). ಇದರ ಅರ್ಥವು ಪರಿಶುದ್ಧ ಆತ್ಮನು ಫಿಲಿಪ್ಪನನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೊತ್ತುಕೊಂಡು ಹೋದನು, ಆದರೆ ಇದು ಬಹುಶಃ ಇದರ ಅರ್ಥವು ಪರಿಶುದ್ಧಾತ್ಮನು ಸೌವಾರ್ತಿಕನಿಗೆ ಇನ್ನೊಂದೆಡೆ ಹೋಗಿ ಬೋಧಿಸಲು ಸೂಚನೆಗಳನ್ನು ಕೊಟ್ಟನು ಎಂದರ್ಥವಾಗಿದೆ (ವಚನಗಳು 26, 29, 40). ಒಮ್ಮೊದೊಮ್ಮಲೇ[40] ಫಿಲಿಪ್ಪನು ಕಂಚುಕಿಯ ಜೀವಿತದಲ್ಲಿ ಪ್ರವೇಶಿಸಿ, ಹೊರಟು ಹೋದನು!

ನಮ್ಮ ಕಡೆಯ ದೃಷ್ಟಿಯಲ್ಲಿ ಖಜಾನೆಯ ಅಧಿಕಾರಿಯು 39ನೇಯ ವಚನದ ಕೊನೆಯಲ್ಲಿ ಸಿಕ್ಕುತ್ತಾನೆ "ಸಂತೋಷವುಳ್ಳವನಾಗಿ ತನ್ನ ದಾರಿಯನ್ನು ಹಿಡಿದು ಹೊರಟನು." ಆತನು ಹೆಚ್ಚು ಸಂತೋಷವುಳ್ಳವನಾದದ್ದು ಆತನು ಯೇಸುವಿನ ಬಗೆಗೆ ತಿಳಿದಿದೇದಕ್ಕಾಗಿಯೇ! ಆತನ ಸಂಪೂರ್ಣ ಜೀವಿತವು ಬದಲಾಯಿತು! ಆತನು ತನ್ನ ಹಿಂದಿನ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಟ್ಟನು ಮತ್ತು ಆತನ ಜೀವಿತದಲ್ಲಿ ದೇವರ ಪ್ರಸನ್ನತೆಯನ್ನು ಹೊಂದಿದನು (2:38)! ಆತನು ಕರ್ತನಿಂದ ಆತನ ಸಭೆಗೆ ಸೇರಿಸಲ್ಪಟ್ಟನು (2:41, 47)! ಆತನ ಹೆಸರು ಕುರಿಮರಿಯ ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಟ್ಟಿತು (ಪ್ರಕಟನೆ 20:15)! ಆತನು ನಿತ್ಯಜೀವಿತದ ನಿರೀಕ್ಷೆಯನ್ನು ಹೊಂದಿದ್ದನು (ತೀತ 1:2)! ಕಂಚುಕಿಯು, ಯೆಹೂದಿಗಳ ರಾಜ್ಯದಲ್ಲಿ ಎರಡನೆಯ ದರ್ಜೆಯ ನಾಗರೀಕನಾಗಿದ್ದನು ಆದರೆ ಈಗ ಅದು ಸತ್ಯವೇನಲ್ಲ! ಆತನು ಯೇಸುವಿನ ರಾಜ್ಯದಲ್ಲಿ ಮೊದಲ ದರ್ಜೆಯ ನಾಗರೀಕನಾಗಿದ್ದಾನೆ.[41]

ಐರೇನಿಯಸ್ ಎಂಬ ಹೆಸರಿನ ಪ್ರಾಚೀನ ಕಾಲದ ಬರಹಗಾರನು ಹೇಳುವುದೇನೆಂದರೆ ಕಂಚುಕಿಯು ಐಥಿಯೋಪಿಯಾಕ್ಕೆ ಹಿಂದುರುಗಿದನು ಮತ್ತು ಕ್ರಿಸ್ತನ ಕಥೆಯನ್ನು ಆ ಪ್ರದೇಶ

ದುದ್ದಕ್ಕೂ ಹರಡಿದನು. ಆ ಅಧಿಕಾರಿಯು ಸರಿಯಾಗಿ ಮಾಡಿದನೆಂಬುದು ನಮಗೆ ತಿಳಿಯದು ಆತನು ಸಂತೋಷಿಸಿದ ನಿಜಾಂಶವನ್ನು ನಮಗೆ ಲೂಕನು ಹೇಳುವಂತದ್ದು ಸೂಚಿಸುವುದೇನೆಂದರೆ ನಾವು ಯಾವುದನ್ನು ಅರಿತುಕೊಳ್ಳುವುದನ್ನು ಬಯಸುವವರಾಗಿದ್ದೇವೆಂದರೆ ಇತರ ಶಿಷ್ಯರು ಕರ್ತನಲ್ಲಿ ಹೇಗೆ ಸಂತೋಷಿಸಿದರೋ ಹಾಗೆಯೇ ಕಂಚುಕಿಯ ಸಂತೋಷಿಸಿದನು: ಆತನು ಸಹ "ಸುವಾರ್ತೆಯನ್ನು ಸಾರಲು ಹೋದನು" ಎಂಬುದರಲ್ಲಿ ಸಂಶಯವಿಲ್ಲ (8:4).

## ಮುಕ್ತಾಯ (8:40)

ಈ ಅಧ್ಯಾಯವು ಫಿಲಿಪ್ಪಿನ ಮುಂದಿನ ಪ್ರಯಾಣದ ದೀರ್ಘ ವಿವರಣೆಯೊಂದಿಗೆ ಕೊನೆಗೊಳ್ಳುತ್ತದೆ "ತರುವಾಯ ಫಿಲಿಪ್ಪನು ಅಜೋತಿನಲ್ಲಿ ಕಾಣಿಸಿಕೊಂಡು ಅಲ್ಲಿಂದ ಕೈಸರೈಯದತನಕ ಎಲ್ಲಾ ಊರುಗಳಲ್ಲಿ ಸುವಾರ್ತೆಯನ್ನು ಸಾರುತ್ತಾ ಹೋದನು" (ವಚನ 40). ಅಜೋತ ಇದು ಫಿಲಿಪ್ಪಿಯರ ಇನ್ನೊಂದು ಪಟ್ಟಣವಾಗಿದ್ದು,[42] ಉತ್ತರ ಭಾರತದಿಂದ ಕೆಲ ಮೈಲಿ ದೂರವಿತ್ತು. ಫಿಲಿಪ್ಪನು ಕರಾವಳಿಯತ್ತ ಹೋಗುತ್ತಾ ಸುವಾರ್ತೆಯನ್ನು ಬೋಧಿಸಿದನು. ಆತನು ಸಾರಲು ತೆರಳಿದ ಸ್ಥಳಗಳ ಹೆಸರುಗಳು ಅಧ್ಯಾಯ 9ರಲ್ಲಿವೆ: ಲೂದ್ಯ ಮತ್ತು ಯೊಪ್ಪ (9:32, 36). ಅಂತಿಮವಾಗಿ, ಆತನು ಕೈಸರೆಯ ಪಟ್ಟಣಕ್ಕೆ ಆತನು ತಲುಪಿದನು. ಆತನು ಅಧ್ಯಾಯ 10ರಲ್ಲಿ ಕೈಸರೆಯಕ್ಕೆ ಹಿಂತಿರುಗಿ ಬರುತ್ತಾನೆ ಮತ್ತು ನಾವು ಫಿಲಿಪ್ಪನನ್ನು ಅಧ್ಯಾಯ 21:8ರಲ್ಲಿ ತಿರುಗಿ ಭೇಟಿಯಾಗೋಣ.

ನಾವು ಮುಗಿಸುತ್ತಿದ್ದಂತೆ ನಾವು ಅಭ್ಯಾಸಿಸಿದ "ಮಾದರಿ ಪರಿವರ್ತನೆಯ" ಬಗೆಗೆ ನಾವು ವಿವರವಾಗಿ ಪುನಾರಾವಲೋಕಿಸೋಣ: ಇದು ಒಬ್ಬ ಮಾದರಿ ಬೋಧಕನನ್ನು (ಫಿಲಿಪ್ಪಿ), ಮಾದರಿ ವೀಕ್ಷಕನ್ನು (ಕಂಚುಕಿ), ಪರಿವರ್ತನೆಯ ಮಾದರಿ ಸಾಧನ (ಸುವಾರ್ತೆ). ಮಾದರಿ ಸಂದೇಶ (ಯೇಸು), ಮತ್ತು ಮಾದರಿ ಪ್ರತಿಕ್ರಿಯೆ (ಶೀಘ್ರ ವಿಧೇಯತೆ) ಇವುಗಳನ್ನು ಹೊಂದಿದೆ ಎಂದು ನಾನು ಸೂಚಿಸುವವನಾಗಿದ್ದೇನೆ. ಈ ಉದಾಹರಣೆಯನ್ನು ಸಂಪೂರ್ಣವಾಗಿ ಪರಿಗಣಿಸುವಾಗ, ಇದು ಸರಳತೆಯ ಮಾದರಿಯಾಗಿತ್ತು ಎಂದು ಸಹ ನಾನು ಸೂಚಿಸಬಹುದಾಗಿದೆ. ಈ ಪರಿವರ್ತನೆಯ ಪ್ರಕರಣದಲ್ಲಿ ಏನು ಮಾಡಲ್ಪಟ್ಟಿತು ಅಥವಾ ಯಾಕೆ ಇದು ಮಾಡಲ್ಪಟ್ಟಿತು ಎಂಬುದನ್ನು ಅರ್ಥೈಸಿಕೊಳ್ಳುವದು ಕಷ್ಟವಾಗಬಹುದು.

ನಿಮ್ಮ ಸ್ವಂತ ಪರಿವರ್ತನೆಯನ್ನು ಖಜಾಂಚಿಯ ಪರಿವರ್ತನೆಯ ಜೊತೆಯಲ್ಲಿ ಇಡಿರಿ ಮತ್ತು ಅವುಗಳನ್ನು ಹೋಲಿಸಿರಿ. ನಿಮ್ಮದು ಆತನ ಹಾಗೆ ಇದೆಯೇ? ನೀವು ಕೇಳಬಹುದಾದ ಕೆಲ ಪ್ರಶ್ನೆಗಳು ಇಲ್ಲಿವೆ: ನಾನು ದೀಕ್ಷಾಸ್ನಾನಹೊಂದಿದಾಗ ವೈಯಕ್ತಿಕವಾದ ಸಮರ್ಪಣೆ ಮಾಡುವಷ್ಟು ವಯಸ್ಕನಾಗಿದ್ದೆನೋ ಅಥವಾ ಶಿಶುವಾಗಿದ್ದೆನೋ? ನಾನು ದೀಕ್ಷಾಸ್ನಾನಕ್ಕಿಂತ ಮುಂಚೆ ಯೇಸು ಕ್ರಿಸ್ತನ ಮೇಲಿನ ನಂಬಿಕೆಯನ್ನು ಅರಿಕೆಮಾಡಿದೆನೋ ಅಥವಾ ಬೇರೆ ಯಾವುದನ್ನೋ ಮಾಡಿದೆನೋ? ಸಮರ್ಪಣೆ ಮಾಡುವಾಗ ನಾನು ಅದನ್ನು ಅರ್ಥೈಸಿಕೊಂಡಿದ್ದೇನೋ ಅಥವಾ ನಾನು ಸಂಪ್ರಾದಾಯಗಳ ಮೂಲಕ ಸಾಗುತ್ತಿದೆನೋ? ನಾನು ನೀರಿನಲ್ಲಿ ಮುಳುಗಿಸಲ್ಪಟ್ಟೆನೋ ಅಥವಾ ಕೇವಲ ಚಿಮಿಕಿಸಲ್ಪಟ್ಟೆನೋ? ಒಂದು ವೇಳೆ ನಿಮ್ಮ ಪರಿವರ್ತನೆಯು ಕಂಚುಕಿಯಂತೆ ಅಲ್ಲ ಎಂದು ನೀವು ಕಂಡುಕೊಂಡಿದ್ದಾದರೆ, ದೇವರಿಗೆ ಸ್ತೋತ್ರ! ಸಂಗತಿಗಳನ್ನು ಸರಿಪಡಿಸಿಕೊಳ್ಳಲು ಈಗಲೂ ತಡವಾಗಿಲ್ಲ! ನಿಮ್ಮ ಆತ್ಮದಲ್ಲಿ ಗೊಣಗದಿರಿ! ಪರಿವರ್ತನೆ ಹೊಂದಬೇಕೆಂದಿದ್ದರೇ ಅದರ ಕುರಿತು ಕಾಳಜಿ ವಹಿಸು!

ಟಿಪ್ಪಣಿಗಳು

[1]J. W. Roberts, *Acts of Apostles*, Part 1 (Austin, Tex.: R. B. Sweet Co., 1967), 63. [2]ವಚನ 26ರಲ್ಲಿ ಕರ್ತನ ದೂತನು ಫಿಲಿಪ್ಪನ ಜೊತೆ ಮಾತನಾಡುತ್ತಾನೆ: ವಚನ 29ರಲ್ಲಿ ಅದು ಆತ್ಮವಾಗಿದೆ. ಒಂದು ಸಾರಿ ದೂತನು ಮಾತನಾಡುವದು ಮತ್ತು ನಂತರ ಆತ್ಮನು ಮಾತನಾಡುವುದನ್ನು ಹೇಳುವುದರ ಮೂಲಕ ಲೂಕನು ಬಹುಶ ಇದಕ್ಕೆ ಪ್ರಮುಖವಾದ ಒತ್ತನ್ನು ಕೊಡುತ್ತಿಲ್ಲ. ಇಲ್ಲಿ ಲೂಕನ ಸೂಚನೆ ಏನೆಂದರೆ ದೇವರು ಫಿಲಿಪ್ಪನಿಗೆ ಮಾರ್ಗದಶನ ಮಾಡಿದನು ಎಂಬುದೇ. [3]ಗಾಜಾ ಇದೊಂದು ಪ್ರಾಚೀನ ಫಿಲಿಪ್ಪಿಯ ಕರಾವಳಿಯ ಪಟ್ಟಣವಾಗಿದೆ (ಆದಿಕಾಂಡ 10:19; 2 ಅರಸು 18:8). ("ಫಿಲಿಪ್ಪ ಮತ್ತು ಪೇತ್ರರ ಪ್ರಯಾಣಗಳು" ಎಂಬ ನಕಾಶೆಯನ್ನು ನೋಡಿರಿ.) ಗಾಜಾವನ್ನು ಅಧಿಕೃತವಾಗಿ ತಲುಪಲು ಕರಾವಳಿಯೊಡನೆಯೇ ಪ್ರಯಾಣ ಮಾಡಬೇಕು. [4]ಯೆರುಸಲೇಮಿನಿಂದ ಗಾಜಾಕ್ಕೆ ನಡೆಸಲು ದಕ್ಷಿಣದಿಂದ ಅನೇಕ ರಸ್ತೆಗಳಿವೆ. ಲೂಕನಿಂದ ಸೂಚಿಸಲ್ಪಟ್ಟ ಒಬ್ಬನು ಬಹುಶಃ ಅತಿ ಕಡಿಮೆ ಪ್ರಯಾಣಿಸಲ್ಪಟ್ಟ ದಾರಿ ಇದಾಗಿದೆ (ಅನೇಕ ಭಾಷಾಂತರಕಾರರು "ಅಡವಿ" ಎನ್ನುವುದರ ಬದಲಾಗಿ "ಮರುಭೂಮಿಯಾಗಿ ಮಾಡಲ್ಪಟ್ಟಿತು" ಎಂದು ಎಂದಿದ್ದಾರೆ). (ಗಮನಿಸಿ: ಮೂಲ ವೇದಭಾಗದಲ್ಲಿ ಸರಳವಾಗಿ "ಇದು ಅಡವಿ" ಎಂದಿದ್ದು ಮತ್ತು ಇದು ರಸ್ತೆಯನ್ನೊ ಅಥವಾ ಹಳೆಯ ಗಾಜಾದ ನಾಶನವನ್ನು ಸೂಚಿಸುವವುಗಳಾಗಿವೆ. NASB ಭಾಷಾಂತರಕಾರರು ಯೋಚಿಸುವುದೇನೆಂದರೆ ಲೂಕನು ರಸ್ತೆಗಳನ್ನು ಸೂಚಿಸುತ್ತಿದ್ದಾನೆ ಎಂದು.) [5]ಖಜಾನೆಯ ಮೇಲ್ವಿಚಾರಕರಂತಹ ಅಧಾಕಾರಿಗಳು ಸಾಮಾನ್ಯವಾಗಿ ಸೇವಕರಿಂದ ಸುತ್ತುವ ರೆದುಕೊಂಡು ಪ್ರಯಾಣಿಸುತ್ತಿದ್ದರು. ಫಿಲಿಪ್ಪನು ಮನೆಯಂತೆ ಅಧಿಕಾರಿಯ ರಥವು ಮಧ್ಯಸ್ಥಳದಲ್ಲಿ ಇದ್ದುದನ್ನು ನೋಡಿರಬಹುದು. [6]ಅಂದು ಐಥಿಯೋಪ್ಯವು ಎಂದು ಕರೆಯಲ್ಪಟ್ಟ ಸ್ಥಳ ಈ ದಿನದ ಐಥಿಯೋಪ್ಯದಷ್ಟು ಪೂರ್ವಕ್ಕೆ ಇರಲಿಲ್ಲ. ಆಧುನಿಕ ಐಥಿಯೋಪಿಯಾವು ಪ್ರಾಚೀನ ಕಾಲದಲ್ಲಿ ಅಬ್ಯಸ್ಸಿನಿಯಾ ಎಂದು ಕರೆ ಯಲ್ಪಡುತ್ತಿತ್ತು. ಪ್ರಾಚೀನ ಐಥಿಯೋಪಿಯಾವು (ಇಂದು ನುಬಿಯಾ ಎಂದು ಕರೆಯಲ್ಪಡುತ್ತದೆ) ನೈಲನದಿಯು ಅಪ್ಪರ ಈಜಿಪ್ಟ್ ಮತ್ತು ಸೂದಾನ ಮೇಲಿನ ಆಸ್ವಾನ್ ಮತ್ತು ಕಾರಟೋವಮ್ ಮಧ್ಯದಲ್ಲಿ ಸ್ಥಾಪಿತವಾಗಿದೆ. [7]"ಕಂದಾಕೆ" ಒಂದು ಬಿರುದಾಗಿತ್ತು ("ಫರೋಹ" ಅಥವಾ "ಸೀಜರ್‌ಗಳಂತೆ") ಹೆಸರಾಗಿರಲಿಲ್ಲ. ಐಥಿಯೋಪ್ಯದ ಅರಸನು ಪರಿಶುದ್ಧಾನೆಂದು ಪರಿಗಣಿಸಲ್ಪಡುತ್ತಿದ್ದನು ಮತ್ತು ರಾಜ್ಯಗಳನ್ನು ನಡೆಸುವ ಅಲ್ಪಕಾರ್ಯಗಳನ್ನು ಮಾಡುತ್ತಿರಲ್ಲ. ಹೀಗೆ ರಾಣಿಯು ದೇಶವನ್ನು ಆಳುವವಳಾಗಿದ್ದಳು. [8]ಆತನು ಅನ್ಯಜಾಂಗದವನಾಗಿದ್ದಾಗ್ಯೂ ದೇವಭಕ್ತಿಯುಳ್ಳವನಾಗಿದ್ದನು ಎಂದು ಸೂಚಿಸಲಾಗಿದೆ ("ದೇವ ಭಕ್ತಿಯುಳ್ಳವ" ಎಂಬುದನ್ನು ಪದಕೋಶದಲ್ಲಿ ನೋಡಿರಿ), ಆದರೆ ಲೂಕನು, ಕೊರ್ನೇಲ್ಯನು ದೇವಭಕ್ತಿಯುಳ್ಳವನು ಹಾಗೂ ಮೊದಲ ಅನ್ಯಜನಾಂಗೀಯ ಪರಿವರ್ತಕನು ಎಂಬುದನ್ನು ಒತ್ತಿ ಹೇಳುವವನಾಗಿದ್ದಾನೆ (ಅಪೊಸ್ತಲರಕೃತ್ಯಗಳು 10; 11; 15:7, 14). ಕೆಲವರು ಹೇಳುವುದೇನೆಂದರೆ ಖಜಾಂಚಿಯು ಪರಧರ್ಮಾವಲಂಭಿ ಆಗಿರಲಿಲ್ಲ ಯಾಕೆಂದರೆ ಆತನು ಆತನ ದೈಹಿಕ ಸ್ಥಿತಿಯಿಂದಲೇ ಆದರೆ ಖಚಿತ ವಾಗಿ ಹೇಳಲಾರೆವು. ಮತ್ತು ಆತನು ಕಂಚುಕಿಯಾದನು ಎಂಬುದನ್ನೂ ನಾವರಿಯೆವು (ಆತನು ಪರಧರ್ಮಾವಲಂಭಿಯಾದ ನಂತರ ಇದು ಸಂಭವಿಸಿರಬಗುದು); ಧರ್ಮೋಪದೇಶಕಾಂಡ 23:1 ಕಂಚುಕಿಯೊಬ್ಬನು (ನಪುಂಸಕನು) ಪರಿಶುದ್ಧ ಸಭೆಯನ್ನು ಪ್ರವೇಶಿಸುವುದನ್ನು ಕೂಡಾ ನಿಷೇಧಿಸಿದೆ; ಅಪೊಸ್ತಲರ ಕಾಲದಲ್ಲಿ ಒಂದು ವೇಳೆ ಯೆಹೂದಿಗಳು ಇನ್ನೂ ಧರ್ಮೋಪದೇಶಕಾಂಡ 23:1 ಕ್ಕೆ ವಿಧೇ ಯರಾಗುತ್ತಿದ್ದರೇನೋ ಎಂಬುದನ್ನು ಕೂಡಾ ನಾವರಿಯೆವು. ಅಧಿಕಾರಿಯು ಬಹುಶಃ ಯೆಹೂದಿಯೂ ಅಥವಾ ಯೆಹೂದಿ ಮತಾವಂಬಿಯೂ ಆಗಿರುತ್ತಿದ್ದನು. [9]ಕಂಚುಕಿಯು ನಪುಂಸಕನಾಗಿದ್ದನು. ಇದು ಅನ್ಯಜನಾಂಗದವರಲ್ಲಿ ಸಾಮಾನ್ಯವಾದ ಅಭ್ಯಾಸ ವಾಗಿದ್ದು ಕಂಚುಕಿಯಾದ ಮನುಷ್ಯರು ಶೋಧನೆಗೀಡು ಮಾಡುವ ಸ್ಥಾನವನ್ನು ಹೊಂದಿರುತ್ತಿದ್ದರು (ಇಂಥ ಜನರು ರಾಣಿಯ ಅಧಿಕಾರಿ ಆಗಿರುವುದರ ಜೊತೆಗೆ ರಾಣಿವಾಸದ ಖಜಾಂಚಿಯ ಆಗಿರುತ್ತಿದ್ದರು). ಕೆಲಸಾರಿ, "ಕಂಚುಕಿ" ಎನ್ನುವ ಪದವು "ಒಬ್ಬ ಅಧಿಕಾರಿ" ಎಂಬರ್ಥದಲ್ಲಿಯೂ ಬಳಕೆಯಾಗುತ್ತಿತ್ತು. ಈ ಮನುಷ್ಯನು ನಪುಂಸಕನಾಗಿದ್ದನೋ ಇಲ್ಲವೋ. ಹೇಗೋ "ಪ್ರಾಯಸ್ಥನಾದ ಗಂಡಸು" ಈ ಪದದ ಸಾಮಾನ್ಯ ಅರ್ಥವಾಗಿದೆ. [10]ಕಂಚುಕಿಯು ಎಂದಿಗೂ ಯಾಜಕನಾಗಲು ಸಾಧ್ಯವಿಲ್ಲ ಎಂದು ಬೋಧಿಸುವ ಯಾಜಕಕಾಂಡ 21:20 ಸಹ ನೋಡಿರಿ. ಈ ಪರುಚ್ಛೇದಗಳ ಉದ್ದೇಶವು ಯೆಹೂದಿಗಳನ್ನು ಅವರ ಸುತ್ತಲೂ ಅನ್ಯರ ಅಭ್ಯಾಸಗಳನ್ನು ಅನುಸರಿಸುವುದರಿಂದ ಬೇರೆ ಮಾಡಿ ಅವರನ್ನು ಧೈರ್ಯಕೆಡಿಸುವುದಲ್ಲ.

[11]ಇನ್ನೊಂದು ಮಾತಿನಲ್ಲಿ, ಆತನು ಸುನ್ನತಿಯಿಲ್ಲದ ಅನ್ಯರೊಡನೆ ಯಾವುದೇ ಪರಿಶುದ್ಧ ಆರಾಧನೆಗಳಲ್ಲಿ ಹತ್ತಿರವಾಗಿರುವುದಾಗಿಲ್ಲ. [12]ರಥವು ವಿಚಿತ್ರ ಕಲ್ಪನೆಯ ಬಂಡಿಯಾಗಿತ್ತು. ಕೆಲ ರಥಗಳು ನಾಲ್ಕು ಚಕ್ರವುಳ್ಳವುಗಳಾಗಿದ್ದವು; ಬಲು ಸಾಮಾನ್ಯವಾದವುಗಳು ಎರಡು ಚಕ್ರವುಳ್ಳವುಗಳಾಗಿದ್ದವು. [13]ಬಹುಶಃ ಕಂಚುಕಿಯು ಯೆರುಸಲೇಮಿನಲ್ಲಿರುವಾಗ ಯೆಶಾಯನ ಗ್ರಂಥದ ಸುರುಳಿಯನ್ನು ಖರೀದಿಸಿ

ರಬಹುದು. ವೈಯಕ್ತಿಕವಾಗಿ ಹೊಂದಿದ ಸುರುಳಿಗಳು ವಿರಳವಾಗಿದ್ದವು. ಅವುಗಳ ನಕಲು ಪತ್ರಿಕೆಗಳು ಕಟ್ಟು ನಿಟ್ಟಾದ ಶರತ್ತುಗಳೊಡನೆ ಕೈಯಲ್ಲಿ ಬರುತ್ತಿದ್ದವು, ಅವು ಬಲು ದುಬಾರಿಯಾಗಿದ್ದವು. [14]ಜೋರಾಗಿ ಓದುವದು ಆ ದಿನಗಳಲ್ಲಿ ಅದು ಅಪೇಕ್ಷಿತವಾದುದಾಗಿತ್ತು. [15]ನನ್ನ ಅನುಭವಗಳದ್ದೇ ಆದ ಅನೇಕ ಉದಾಹರಣೆಗಳು ಮನಸ್ಸಿನಲ್ಲಿ ಬಂದವು. ಮುದ್ರಿತವಾದ ಪುಸ್ತಕ *The Lord Will Find a Way* (Dallas: Christian Publishing, 1966) ಇದು ಜಗತ್ತಿನಾದ್ಯಂತದ ನೂರಾರು ಉದಾಹರಣೆಗಳನ್ನು ಹೊಂದಿದೆ. ನೀವೂ ಇಲ್ಲಿ ಸೇರಿಸಬಹುದಾದಂತಹ ನಿಮ್ಮದೇ ಆದ ಉದಾಹರಣೆಗಳನ್ನು ಹೊಂದಿದ್ದೀರಿ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. [16]ಈ ಕಥೆಯು Rick Atchley, "Road to Salvation," Sermon preached at the Southern Hills church of Christ, Abilene, Texas, on 19 May 1985 ನಲ್ಲಿ ತೆಗೆದುಕೊಳ್ಳಲ್ಪಟ್ಟಿದೆ. [17]ಇದು ಸ್ಪೆಟುಗೆಂಟನಿಂದ ತೆಗೆದುಕೊಳ್ಳಲ್ಪಟ್ಟ ವಾಕ್ಯವಾಗಿದೆ. [18]ಯೆಹೂದ್ಯರಿಗೆ ಇದು ಪ್ರಮುಖ ಅಡೆತಡೆಯಾಗಿತ್ತು. ಅಪೊಸ್ತಲರಕೃತ್ಯಗಳು 2 ಮತ್ತು 3ರ ಪೇತ್ರನ ಪ್ರಸಂಗದೊಂದಿಗೆ ಈ ಸಂಗತಿಯು ಜೊತೆಗೂಡಿದ್ದರ ಮೇಲಿನ ಭಾಷ್ಯಗಳನ್ನು ನೋಡಿರಿ. [19]ಕುರಿಯನ್ನು ವಧಿಸುವುದನ್ನು ನಾವು ನೋಡಿದ್ದೇವೆ, ಮತ್ತು ಕುರಿಯ ಮೌನವು ನಿಗೂಢವಾಗಿರುತ್ತದೆ. ನಾನು ಮಾತನಾಡಿನಿದಂತಹ ಕೆಲವರು ಕುರಿಯನ್ನು ವಧಿಸುವಾಗ ಅದು ಕೂಗುವದು ಎಂದು ವರಧಿಮಾಡುತ್ತಾರೆ. ಪ್ರತ್ಯಕ್ಷವಾಗಿ, ಕುರಿಯು ಮೌನವಾಗಿರುವದೋ ಅಥವಾ ಇಲ್ಲವೋ ಎಂಬುದು ಅವರು ವಧಿಸುವ ಕೌಶಲ್ಯದ ವೇಳೆ ಅವಲಂಭಿತವಾಗಿರುತ್ತದೆ. [20]ಆತನು ಪಡೆಯಲಿಲ್ಲ (ಉದಾಹರಣೆ: ಆತನು ಏನನ್ನು ಹೊದಬೇಕಾಗಿತ್ತೋ ಅದನ್ನೆ).

[21]ಈ ವೇದಭಾಗದ ಭಾಷಾಂತರದಲ್ಲಿ ಇನ್ನೊಂದು ಸಾಧ್ಯತೆಯೆಂದರೆ "ಆತನ ಪ್ರಾಣವು ಭೂಮಿಯಿಂದ ತೆಗೆಯಲ್ಪಟ್ಟಾಗ್ಯೂ ಕೂಡಾ. ಆತನು ಇನ್ನೂ ಅನೇಕ ಆತ್ಮೀಕ ಹೊರಸೂಸುವಿಕೆಗಳನ್ನು ಹೊಂದಿದ್ದನು, ಅವುಗಳು ಎಂದಿಗೂ ಗಣನೆಗೆ ಬರಲಿಲ್ಲ. [22]ಕೆಲ ವಿಷಯಗಳನ್ನು ಹೊಸ ಒಡಂಬಡಿಕೆಯ ಬೋಧಕರು ತಾವು "ಯೇಸುವನ್ನು ಬೋಧಿಸುವಂತೆ" ಸಂಪೂರ್ಣಗೊಳಿಸಿದ್ದಾರೆ ಎಂಬುವುದಕ್ಕಾಗಿ "ಕ್ರಿಸ್ತನನ್ನು ಘೋಷಿಸುವದು ಇದರ ಅಥವೇನು" ಎಂಬ ಪಾಠವನ್ನು ನೋಡಿರಿ. [23]ಕಂಚುಕಿಯು ಯಾವ ರಸ್ತೆಯಲ್ಲಿ ತೆಗೆದುಕೊಂಡನು ಅಥವಾ ಸರಿಯಾಗಿ ಯಾವ ರಸ್ತೆಯಲ್ಲಿ ಆತನು ಇದ್ದನು ಎಂಬುದು ನಮಗೆ ಖಚಿತವಾಗಿಲ್ಲ. ಆತನು ದೀಕ್ಷಾಸ್ನಾನ ಹೊಂದಿದಂತಹ ಸರಿಯಾದ ಸ್ಥಳವು ನನಗೆ ಖಚಿತವಾಗಿಲ್ಲ. ಮುಳುಗುವುದಕ್ಕೆ ಯೋಗ್ಯವಾದ ಸಾಮಾನ್ಯ ಸ್ಥಳಗಳಲ್ಲಿ ಅನೇಕ ನೀರಿನ ಕೊಳಗಳು ಇದ್ದವು. [24]ಒಂದು ವೇಳೆ ನೀವು ಈ ಪಾಠದಲ್ಲಿ ಒಂದು ಕಲ್ಲನ್ನು ತರಲೆಂದು ಒಬ್ಬ ಹುಡುಗನನ್ನು ಹೊರಗೆ ಕಳುಹಿಸುವ ದೃಷ್ಟಾಂತವನ್ನು ನೀವು ಬಳಸಿದ್ದರೆ "ಕ್ರಿಸ್ತನನ್ನು ಘೋಷಿಸುವದು ಇದರ ಅಥವವೇನು" ಎಂಬ ಪಾಠವು ಇಲ್ಲಿ ಸರಿಯಾಗಿ ಹೊಂದಿಕೆಯಾಗುವದು. [25]ಇದು ಪದಗಳ ಆಟವಾಗಿದೆ. "ಹೊರಗಿನದಾರಿ" ಇದು ಹೊರಗಡೆಯನ್ನು ಸೂಚಿಸುವುದಾಗಿದೆ; "ಒಳಗಿನ ದಾರಿ" ಇದು ಪ್ರವೇಶವನ್ನು ಸೂಚಿಸುವುದಾಗಿದೆ. "ಹೊರಗಿನ ದಾರಿಯನ್ನು" (ಅಥವಾ "ಹೊರಗಿನದು") ಕಂಡುಕೊಳ್ಳಲು ಪ್ರಯತ್ನಿಸುವುದು ಯಾವುದನ್ನೂ ಮಾಡದೇ ಇರುವದಕ್ಕಾಗಿ ಈ ಪಾಠದಿಂದ ಕಾರಣಗಳನ್ನು (ಅಥವಾ ನೆವಗಳನ್ನು) ಕಂಡುಕೊಳ್ಳಲು ಪ್ರಯತ್ನಿಸುವುದೇ ಆಗಿದೆ. [26]ಶಿಶುಗಳು ದೀಕ್ಷಾಸ್ನಾನಕ್ಕೆ ಯೋಗ್ಯವಾದ ಅಭ್ಯರ್ಥಿಗಳಲ್ಲ, ಯಾಕೆಂದರೆ ನಂಬಿಕೆಯಲ್ಲಿ ಅವರು ಅಸಮರ್ಥರಾಗಿ ದ್ದಾರೆ. [27]ಇದರಲ್ಲಿ ಈ ವಚನದ ಜೊತೆ ನಾವು ಯಾವ ಹಿಂದಿನ ಹಸ್ತ ಪ್ರತಿಗಳನ್ನು ಹೊಂದಿಲ್ಲ, ಇದು ಎರಡನೆಯ ಶತಮಾನದಲ್ಲಿ ಐರೇನಿಯಸನಿಂದ ವ್ಯಾಖ್ಯಾನಿಸಲ್ಪಟ್ಟಿದ್ದು, ಈ ಪರಿಚ್ಛೇದವು ಹಿಂದಿನ ಮೂಲವನ್ನು ಸೂಚಿಸುವುದಾಗಿದೆ. ಬಹುಶಃ ಇದು ಶಾಸ್ತ್ರಿಗಳಿಂದ ಜೋಡಿಸಲ್ಪಟ್ಟ ಮಿತಿಯಿಂದ ಜೋಡಿ ಸಲ್ಪಟ್ಟಿದ್ದು (ಆದಿ ಸಭೆಯಲ್ಲಿನ ಅಭ್ಯಾಸಗಳ ಬಗೆಗೆ ಹೇಳುವದು) ಇದು ಕೆಲ ಹಸ್ತಪ್ರತಿಗಳಿಗಾಗಿ ತನ್ನ ಮಾರ್ಗವನ್ನು ಮಾಡಿದೆ. [28]ಕೆಲ ವಚನಗಳಲ್ಲಿ ಮತ್ತು ಕೆಲ ಭಾಷಾಂತರಗಳಲ್ಲಿ, ಕೆಲ ಪರ್ಯಾಯ ಶಬ್ಧಗಳು, "ಉದ್ಯೋಗಗಳಂತೆ" ಬಳಸಲ್ಪಟ್ಟಿವೆ. [29]ಎಡ್ಗರ ಎ ಗುಡಸ್ಪೀಡ್‌ರ ಭಾಷಾಂತರವು ಸಹ ಎಫೆಸ 5:26ರಲ್ಲಿನ ಪಶ್ಚಾತ್ತಾಪವನ್ನು ಒಳಗೊಂಡಿದೆ. "... ಆಕೆಯನ್ನು (ಸಭೆಯನ್ನು) ಪರಿಶುದ್ಧ ಗೊಳಿಸಿದನು, ಆಕೆಯನ್ನು ಜಲದಿಂದ ಸ್ನಾನಮಾಡಿಸಿ ಶುದ್ಧಮಾಡಿ ಆಕೆಯ ಮೂಲಕ ಆತನಿಗೆ ಒಪ್ಪಿಕೊಳ್ಳುವಂತೆ ಮಾಡಿದನು" (ಹೊಸ ಒಡಂಬಡಿಕೆ: ಅಮೇರಿಕನ ಭಾಷಾಂತರ). [30]ನಾವು ಯೇಸುವಿಗೆ ಬಾಯಿಂದ ಮತ್ತು ಜೀವತದ ನಮ್ಮೆಲ್ಲ ಜೀವಿನದಿಂದ, ನಾವು ಮರಣ ಹೊಂದುವ ತನಕ ಅರಿಕೆಮಾಡಬೇಕು.

[31]ಅಪೊಸ್ತಲರಕೃತ್ಯಗಳು 1ನೆಯ ಪುಸ್ತಕದಲ್ಲಿನ 2:38ರ ಟಿಪ್ಪಣಿಯನ್ನು ನೋಡಿರಿ. [32]ರೋಮಾಪುರ 10:9, 10 ದೀಕ್ಷಾಸ್ನಾನವು ರಕ್ಷಣೆಗೆ ಅವಶ್ಯವಿಲ್ಲ ಎಂಬುದನ್ನು ಖಚಿತಪಡಿಸಲು ಕೆಲಸಾರಿ ಬಳಸುವವರಾಗಿರುತ್ತಾರೆ. ರೋಮಾಪುರ 10 ವಿಧೇಯತೆಯೂ ಕೂಡ ರಕ್ಷಣೆಗೆ ಅವಶ್ಯ ಎಂಬುದನ್ನು ಒತ್ತಿ ಹೇಳುತ್ತದೆ (ವಚನ 16, 21). ರೋಮಾಪುರ 10:9, 10 ರಕ್ಷಣೆಗೆ ದೀಕ್ಷಾಸ್ನಾನವು ಅವಶ್ಯವೆಂದು

ಹೆಚ್ಚು ಬೋಧಿಸುವದಿಲ್ಲ ಯಾಕೆಂದರೆ ಆ ಪರಿಚ್ಛೇದವು 1 ಪೇತ್ರ 3:21 ನಂಬಿಕೆ ಮತ್ತು ಪಶ್ಚಾತ್ತಾಪಗಳು ರಕ್ಷಣೆಗೆ ಅವಶ್ಯವೆಂದು ಬೋಧಿಸುವುದಕ್ಕಿಂತ ದೀಕ್ಷಾಸ್ನಾನವನ್ನು ಸೂಚಿಸುವುದಿಲ್ಲ ಯಾಕೆಂದರೆ ಆ ಪರಿಚ್ಛೇದವು ಎರಡು ಅವಶ್ಯಕತೆಗಳನ್ನು ಸೂಚಿಸಿಲ್ಲ. [33]"ಯೇಸು" ಇದರ ಅಕ್ಷರ ಸಹ ಅರ್ಥವು "ಯೆಹೋವನು ರಕ್ಷಿಸುವನು" ಎಂದು ಯೇಸುವು ದೈವೀಕತ್ವವುಳ್ಳವನು ಮತ್ತು ಆತನು ರಕ್ಷಕನು ಎಂದು ಸೂಚಿಸುವುದಾಗಿದೆ. [34]ಪೇತ್ರನು ಸಾಗುವಲ್ಲಿ (ಮತ್ತು ಬಹುಶಃ ಕಂಚುಕಿಯು) "ಒಳ್ಳೆಯ ಅರಿಕೆಯು" ಮಾಡಲ್ಪಟ್ಟಿದೆ. ಹೇಗೂ, ಯೇಸುವು ಪಿಲಾತನ ಪ್ರಶ್ನೆಗೆ ಸರಳವಾಗಿ ಸಕಾರಾತ್ಮಕವಾಗಿ ಉತ್ತರಿಸುತ್ತಾ (ಯೋಹಾನ 18:37) "ಒಳ್ಳೆಯ ಅರಿಕೆಯನ್ನು" ಮಾಡಿದನು (1 ತಿಮೊಥೆ 6:13). ಅಥವಾ ದೀಕ್ಷಾಸ್ನಾನಕ್ಕಿಂತ ಮುಂಚೆ ಎರಡೂ ರೀತಿಯಲ್ಲಿ ಅರಿಕೆಮಾಡುವದು ಸತ್ಯವೇದದ ಅನುಸಾರವಾಗಿದೆ. [35]ಬೈಬಲ್ ಬೆಲ್ಟನಲ್ಲಿ ನಾನು ಸಹ ಗಮನಿಸುವುದೇನೆಂದರೆ ಫಿಲಿಪ್ಪನು "ಚರ್ಚು ನಿನ್ನನ್ನು ಆಯ್ಕೆ ಮಾಡುವ ತನಕ ನೀನು ಕಾಯಲೇ ಬೇಕು" ಈ ಅಭ್ಯಾಸವು ಒಂದೇ ಪಂಗಡಕ್ಕೆ ಸಂಬಂಧಿಸಿದ್ದು ಎಂದು ಹೇಳಲಿಲ್ಲ. ನೀನು ಶ್ರಮಿಸುತ್ತಿರುವ ಪ್ರದೇಶಗಳಲ್ಲಿ ನಿನ್ನ ಟೀಕೆ ಟಿಪ್ಪಣೆಗಳನ್ನು ಅಲ್ಲಿಯ ಧಾರ್ಮಿಕ ಅಭ್ಯಾಸಗಳಿಗೆ ಹೊಂದಿಸಿಕೋ. [36]ಒಂದು ವೇಳೆ ಕಂಚುಕಿಯು ತನ್ನೊಡನೆ ಪ್ರಯಾಣಿಸುವ ಅನೇಕ ಜನರನ್ನು ಹೊಂದಿದ್ದರೆ, ಆತನು ಒಬ್ಬ ಸಾರಥಿಯನ್ನು ಹೊಂದಿರಬಹುದಿತ್ತು ಮತ್ತು ರಥವನ್ನು ನಿಲ್ಲಿಸಲು ಆಳುಗಳಿಗೆ ಆಜ್ಞೆಮಾಡಬಹುದಿತ್ತು. ಒಂದು ವೇಳೆ ಕಂಚುಕಿಯು ಏಕಾಂತ ವಾಗಿ ಪ್ರಯಾಣಿಸುತ್ತಿದ್ದರೆ, ತನ್ನ ಕುದುರೆಗಳಿಗೆ "ಓಯ್" ಎಂದು ಹೇಳಬಹುದಿತ್ತು. [37]ಈ ಪಾಠದ ವಿಚಾರಧಾರೆಯನ್ನು ಮುಂದುವರೆಸುತ್ತಾ ದೀಕ್ಷಾಸ್ನಾನವನ್ನು ಪೌಲನು ಶವಸಂಸ್ಕಾರವೆಂದು ಒತ್ತಿ ಹೇಳಿದ (ರೋಮಾಪುರ 6:3, 4; ಕೊಲಸ್ಸೆ 2:12) ವಿಷಯವನ್ನು ನೀವೂ ಸಹ ಗುರುತಿಸಬಹುದು. [38]ಯೇಸು ದಿಕ್ಷಾಸ್ನಾನ ಹೊಂದಿದ ನಂತರ, ಆತನೂ ಸಹ "ಕೂಡಲೇ ನೀರಿನಿಂದ ಮೇಲಕ್ಕೆ ಬರಲು ..." ಎಂದು ಮತ್ತಾಯ 3:16 ಗಮನಿಸುತ್ತವೆ. ಇನ್ನೊಂದು ಇದಕ್ಕೆ ತಕ್ಕದಾದ ಪರಿಚ್ಛೆದವು ಯೋಹಾನ 3:23, ಇದು ಸೂಚಿಸುದೇನೆಂದರೆ ಯೋಹಾನನು ಒಂದು ನಿಶ್ಚಿತವಾದ ಸ್ಥಳದಲ್ಲಿ ದೀಕ್ಷಾಸ್ನಾನ ಮಾಡಿಸುತ್ತಿದ್ದನು. "ಯಾಕೆಂದರೆ ಅಲ್ಲಿ ಬಹಳ ನೀರಿತ್ತು." ನೀರನ್ನು ಚಿಮುಕಿಸುವದಕ್ಕೆ ಸ್ವಲ್ಪ ನೀರು ಸಾಕು ಆದರೆ ಮುಣುಗಿಸುವದಕ್ಕೆ "ಬಹಳವಾದ ನೀರು ಬೇಕು." [39]J. W. McGarvey, *New Commentary on Acts of Apostles*, vol. 1 (Delight, Ark.: Gospel Light Publishing Co., n.d.), 160. [40]ತ್ವರಿತವಾಗಿ ನಡೆದ ಈ ಘಟನೆ ಬಹುಶಃ ಕಂಚುಕಿಯು ಫಿಲಿಪ್ಪನನ್ನು ಹಿಂಬಾಲಿಸುವದನ್ನು ನಿರಾಶೆಗೆ ಎಡೆ ಮಾಡಿರಬಹುದು. ಖಜಾಂಚಿಯು ಸುವಾರ್ತೆಯ ಸಂದೇಶದೊಡನೆ ತನ್ನ ಪಟ್ಟಣಕ್ಕೆ ಹಿಂತಿರುಗುವುದನ್ನು ದೇವರು ಬಯಸುವವನಾಗಿದ್ದನು ಎಂಬುದರಲ್ಲಿ ಯಾವ ಸಂಶಯವಿಲ್ಲ.

[41]ಯೆಶಾಯ 56:3-5 ಇದೊಂದು ಪ್ರಕರಣವೆಂಬಂತೆ ಪ್ರವಾದಿಸಿದೆ. [42]ಇದು ಅಷದೊಡ್‌ನ ಪ್ರಾಚೀನ ಪಟ್ಟಣವಾಗಿದೆ. [43]ನೀವು ವಾಸಿಸುವ ಪ್ರದೇಶದಲ್ಲಿ ಧಾರ್ಮಿಕ ಸ್ಥಿತಿಗಳಿಗೆ ಹೊಂದುವಂತೆ ಇವುಗಳನ್ನು ಹೊಂದಿಸಿಕೊಳ್ಳಿರಿ.